
ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K·R·N·N· 240 ಸಂಪುಟ : 1 ಸಂಚಿಕೆ : 18 ಡಿಸೆಂಬರ್ 15 ರಿಂದ 31–1997 ಪುಟಗಳು : 24 ರೂ. 5



ಕಡಲ ತೀರದ ಭಾರ್ಗವ ಶ್ರೀ ಕೋಟಾ ಶಿವರಾಮ ಕಾರಂತರಿಗೆ
ಆರುಕೋಟಿ ಕನ್ನಡಿಗರ ನಮನ

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ, ಮಡಿಕೇರಿ

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ 4-1-1998ರ ಭಾನುವಾರ ಬೆಳಿಗ್ಗೆ 10-00 ಗಂಟೆಯಿಂದ ಸಂಜೆ 5-00 ಗಂಟೆ ತನಕ ಮಡಿಕೇರಿ ಗೌಡ ಸಮಾಜದಲ್ಲಿ ಗೌಡರ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕೊಡಗು ಗೌಡ ವಿದ್ಯಾಸಂಘ ಮತ್ತು ಕೊಡಗು ಗೌಡ ಮಹಿಳಾ ಒಕ್ಕೂಟ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆಸಲು ತೀರ್ಮಾನಿಸ ಲಾಗಿದೆ.

ಗೌಡರ ಸಂಸ್ಕೃತಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವ ವ್ಯಕ್ತಿಗಳು ಅಥವಾ ತಂಡಗಳು, ಸಂಘ ಸಂಸ್ಥೆಗಳು ದಿನಾಂಕ 25-12-1997ರ ಒಳಗಾಗಿ ತಮ್ಮ ತಮ್ಮ ಕಾರ್ಯಕ್ರಮಗಳ ವಿವರಗಳ ಪ್ರವೇಶ ಪತ್ರವನ್ನು ತುಂತಜ್ಜೀರ ವೆಂಕಟೇಶ್(ಗಣೇಶ್) ಅಧ್ಯಕ್ಷರು,ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ, ಕೊಡಗು ಗೌಡ ವಿದ್ಯಾಸಂಘ ಕಾರ್ಯಾ ಲಯ, ಮಡಿಕೇರಿ, ಕೊಡಗು-571 201. ಇವರಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.

ಗೌಡ ಕನ್ನಡದಲ್ಲಿ (ಅರೆಭಾಷೆ) ನೀಡುವ ಕಾರ್ಯಕ್ರಮಗಳಿಗೆ ಪ್ರಾಮುಖ್ಯತೆ ನೀಡ ಲಾಗುವುದು. ಆಯ್ಕೆಯಾದ ವ್ಯಕ್ತಿಗಳಿಗೆ ಅಥವಾ ತಂಡ, ಸಂಘ ಸಂಸ್ಥೆಗಳಿಗೆ ಅಕಾಡೆಮಿ ವತಿಯಿಂದ ಸೂಚನ ಪತ್ರವನ್ನು ಕಳುಹಿಸಲಾಗುವುದು. ಸರ್ವ ಗೌಡ ಬಾಂಧವರು ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದು ಅಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಕಾರ್ಯ ಕ್ರಮವನ್ನು ಜಯಪ್ರದಗೊಳಿಸಿಕೊಡಬೇಕೆಂದು ಪ್ರಾರ್ಥಿಸಲಾಗಿದೆ.

ತುಂತಜ್ಜೀರ ವೆಂಕಟೇಶ್	**ಗುಡ್ಡೇರ ಬಿ. ರಮೇಶ್**	**ಕೋಡಿ ಚಂದ್ರಶೇಖರ್**
ಅಧ್ಯಕ್ಷರು	ಉಪಾಧ್ಯಕ್ಷರು	ಕಾರ್ಯದರ್ಶಿ

ಪಳ್ಳಿಪುರ ಎಸ್. ಭರತ್

ಖಜಾಂಚಿ

ಪ್ರಪ್ರಥಮ ಬಾರಿಗೆ ಮಡಿಕೇರಿ ನಗರದ ಗೌಡಬಾಂಧವರಿಂದ ಹುತ್ರಿ ಹಬ್ಬದ ಆಚರಣೆ

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಮತ್ತು ಕೊಡಗು ಗೌಡ ಮಹಿಳಾ ಒಕ್ಕೂಟವು ಜೊತೆಗೂಡಿ ದಿನಾಂಕ 13-12-1997ರಂದು ಹುತ್ರಿ ಹಬ್ಬವನ್ನು ಪ್ರಥಮಬಾರಿಗೆ ವಿಜೃಂಭಣೆಯಿಂದ ಆಚರಿಸಿದರು.

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರಿತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ರಮೇಶ್

ವರದಿಗಾರ :
ಪಟ್ಟಡ ಎಲ್. ಶಿವಕುಮಾರ್

ಕಾರ್ಯ ನಿರ್ವಾಹಕಿ :
ಕು॥ ಗೀತಾ ಮೋಂಟಡ್ಕ

ಪತ್ರಿಕಾ ಪ್ರತಿನಿಧಿ :
ಕು॥ ಧನು ಚೆರಿಯಮನೆ

ಕಛೇರಿ ನಿರ್ವಹಣೆ :
ಪಟ್ಟಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ
ಮುಙ್ಞಾಪುರ ಧರಣಿ ಗಣಪತಿ

ಮುದ್ರಕರು :
ಮುಙ್ಞಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,

ಗೌರವ ಸಂಪಾದಕ :
ಪಟ್ಟಡ ಎಂ. ಪ್ರಭಾಕರ್

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 322, ಹಿನಕಲ್ ಗ್ರಾಮ ಮತ್ತು
ಅಂಚೆ [ಅರಳಿಕಟ್ಟೆ ಹತ್ತಿರ]
ಮೈಸೂರು–570 017.

ದೂರವಾಣಿ : **0821–516771**

ಒಳನೋಟ

ಪುಟಗಳು

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ

ಇತಿಹಾಸದ ಕಡಲ ತೀರದ ಭಾರ್ಗವ ಕೋಟಾ ಶಿವರಾಮ ಕಾರಂತ

ಜ್ಞಾನಪೀಠ ಪ್ರಶಸ್ತಿ ವಿಜೇತ, ಹಿರಿಯ ಮುತ್ಸದ್ಧಿ, ಲೇಖಕ ಕಾರಂತರು ಇದೇ ಡಿಸೆಂಬರ್ 9ರ ಬೆಳಿಗ್ಗೆ 11–35ಕ್ಕೆ ತಮ್ಮ 96ನೇ ವಯಸ್ಸಿನಲ್ಲಿ ಹೃದಯಘಾತದಿಂದ ವಿಧಿವಶರಾದರು.

ದ.ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಟದಲ್ಲಿ 10–10–1902ರಲ್ಲಿ ಜನಿಸಿದ ಕಾರಂತರು ಕುಂದಾಪುರ ಶಾಲೆಯಲ್ಲಿ ಮತ್ತು ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿರುತ್ತಾರೆ. ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ, ವಿಜ್ಞಾನ, ರಂಗಭೂಮಿ, ಯಕ್ಷಗಾನ, ಚಿತ್ರಕಲೆ, ಶಿಲ್ಪಕಲೆ, ಛಾಯಾಚಿತ್ರ, ಪತ್ರಿಕೋದ್ಯಮ, ಶಿಕ್ಷಣ, ಭಾಷೆ, ರಾಜಕೀಯ ಹೀಗೆ ಬದುಕಿನ ಎಲ್ಲ ಜ್ಞಾನವಲಯಗಳಲ್ಲಿ ಆಸಕ್ತಿ ಹೊಂದಿದ ಕಾರಂತರು ತುಂಬಾ ಕ್ರಿಯಾಶೀಲರಾಗಿ ಅವುಗಳನ್ನು ಮಾಡಿ ಸಾಧಿಸಿದ ಬಹುಮುಖ ಪ್ರತಿಭೆಯುಳ್ಳವರು.

ಕಾರಂತರು ಬರೆದ ಯಕ್ಷಗಾನ– ಬಯಲಾಟ ಕೃತಿಗೆ 1959ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದೆ. 1955ರಲ್ಲಿ ಮೈಸೂರಿನಲ್ಲಿ ನಡೆದ 37ನೇ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಪಟ್ಟ ಅಲಂಕರಿಸಿದ್ದರು. 1960ರಲ್ಲಿ ಜನಪದ ನೃತ್ಯ ಕಲೆಗೆ ಸ್ವೀಡಿಷ್ ಅಕಾಡೆಮಿಯ ಪ್ರಶಸ್ತಿ ಪಡೆದರು. 1963ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ, 1968ರಲ್ಲಿ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಅವರ 'ಮೂಕಜ್ಜಿಯ ಕನಸು'ಗಳು ಕಾದಂಬರಿಗೆ 1977ರಲ್ಲಿ "ಜ್ಞಾನಪೀಠ" ಪ್ರಶಸ್ತಿ ಲಭಿಸಿತು.

ನಿಸರ್ಗ ಪ್ರೇಮಿಯಾದ ಕಾರಂತ ಶಾಲೆಗಿಂತ ಹೆಚ್ಚಾಗಿ ಹಳ್ಳಿಯ ಮತ್ತು ಸಮುದ್ರದ ಪರಿಸರವನ್ನು ಸವಿಯಲು ಇಷ್ಟಪಡುತ್ತಿದ್ದರಲ್ಲದೆ ಯಕ್ಷಗಾನ ಪ್ರಸಂಗಗಳ ನಡುವೆ ಹೆಚ್ಚಿನ ಕಾಲ ವ್ಯಯ ಮಾಡುತ್ತಿದ್ದರು. 1922ರಲ್ಲಿ ಗಾಂಧೀಜಿಯವರು ವಿದೇಶಿ ಶಿಕ್ಷಣ ನೀತಿಯನ್ನು ವಿರೋಧಿಸಿದಾಗ ಕಾಲೇಜಿಗೆ ತಿಲಾಂಜಲಿ ಇತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಜನರಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿಸುವುದಕ್ಕಾಗಿ ಅನೇಕ ನಾಟಕಗಳನ್ನು ರಚಿಸಿ, ರಂಗಪ್ರಯೋಗಕ್ಕೂ ಅಳವಡಿಸಿದ್ದರು. ಅಂದು ಶಿಕ್ಷಣದ ಜಟಿಲ ಸಮಸ್ಯೆಗಳನ್ನು ನೀಗಿಸಲು ಮಕ್ಕಳಿಗಾಗಿ ಹಲವು ಪುಸ್ತಕಗಳನ್ನು ಬರೆದು ಮಕ್ಕಳ ಕುತೂಹಲ, ಜ್ಞಾನಾಭಿವೃದ್ಧಿಗಾಗಿ ಕಿರಿಯರ ವಿಶ್ವಕೋಶವನ್ನು ರಚಿಸಿದರು.

ಕನ್ನಡ ಸಾಹಿತ್ಯವಲ್ಲದೆ ಭಾರತೀಯ ಸಾಹಿತ್ಯ ಕ್ಷೇತ್ರಕ್ಕೂ ಕಾಲಿಟ್ಟ ಮಹಾಮೇರು ವ್ಯಕ್ತಿ. ಹಲವಾರು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು, ಜ್ಞಾನಪೀಠ ಪ್ರಶಸ್ತಿಯು ಅಲ್ಲದೇ ಹತ್ತು ಹಲವು ಪ್ರಶಸ್ತಿಗಳು ಅಸಂಖ್ಯಾತ ಸಮ್ಮೇಳನಗಳ ಗೋಷ್ಠಿಗಳ ಅಧ್ಯಕ್ಷ ಪಟ್ಟಗಳು ಇವರದ್ದಾಗಿದೆ ತುರ್ತು ಪರಿಸ್ಥಿತಿಯ ಇಂದಿರಾ ಗಾಂಧಿಯ ಸರ್ವಾಧಿಕಾರವನ್ನು ಧಿಕ್ಕರಿಸಿ ಪದ್ಮಭೂಷಣ ಪ್ರಶಸ್ತಿಯನ್ನು ಕೇಂದ್ರ ಸರ್ಕಾರಕ್ಕೆ ವಾಪಸ್ಸು ಮಾಡಿದರು. ದಿಟ್ಟತನ ತೋರಿದ ಕಾರಂತರ ಕ್ರಮವು ನಿಜಕ್ಕೂ ಪ್ರಶಂಸನೀಯ.

ಜೀವನದ ಹತ್ತು ಹಲವು ಏರು-ಪೇರುಗಳಲ್ಲಿ ನಂಬಿಕೆಗೆ, ಆಚಾರ, ವಿಚಾರ, ಸಮಾಜದಲ್ಲಿ ಅಪಾರ ಮಡಿವಂತಿಕೆ ಇದ್ದ ಆ ಕಾಲದಲ್ಲಿ ಅಂತರ್ಜಾತಿ ವಿವಾಹ ಮಾಡಿಕೊಂಡು ದಿಟ್ಟತನ ತೋರಿದ ಸಾಹಸಿಗ. ಯಾವ ಟೀಕೆಗಳಿಗೂ ಜಗ್ಗದೆ ತಮ್ಮ ನಾಟ್ಯ ಶಾಲೆಯ ಶಿಷ್ಯೆ ಲೀಲಾಳನ್ನು ಜೀವನ ಸಂಗಾತಿಯನ್ನಾಗಿ ಮಾಡಿಕೊಂಡ ಧೀರ. ಮುಚ್ಚುಮರೆಯಿಲ್ಲದ ಬಿಚ್ಚುಮನಸ್ಸಿನ ಸ್ನೇಹ ಸಲುಗೆಯ ಸರಳಜೀವಿ.

ಪತ್ರಿಕಾ ರಂಗಕ್ಕೂ ಕಾಲಿಟ್ಟು ವಸಂತ ಮತ್ತು ವಿಚಾರವಾಣಿ ಪತ್ರಿಕೆಗಳನ್ನು ಆರಂಭಿಸಿ ಆ ಮೂಲಕ ವಿಶಿಷ್ಟ ಸೇವೆ ಸಲ್ಲಿಸಿ, ಪತ್ರಿಕೆಗಾಗಿ ಬಹಳಷ್ಟು ಹೆಣಗಿದರು ಅದನ್ನು ಉಳಿಸಿಕೊಂಡು ಹೋಗಲಾಗಲಿಲ್ಲ. ಇದು ಅವರಿಗೊಂದು ಕಹಿ ಅನುಭವ ಅಲ್ಲದೇ ನಿರಾಶೆಯನ್ನು ತಂದುಕೊಟ್ಟ ವಿಚಾರವಾಗಿತ್ತು. ಪತ್ರಿಕಾ ರಂಗದಲ್ಲಿ ಕೈಸುಟ್ಟುಕೊಂಡರೂ ಸಾಹಸೀ ಪ್ರವೃತ್ತಿ ಮಾಗಿರಲಿಲ್ಲ.


[4ನೇ ಪುಟ ನೋಡಿ]

ಕ್ರಾಂತಿಕಾರಿ ಯುವ ಹೋರಾಟಗಾರ

ವೆಸ್ಟರ್ನ್‌ವುಡ್ ಇಂಡಸ್ಟ್ರೀಸ್ ಮಾಲೀಕ ಪಳ್ಳಿಪುರ ಎಸ್. ಭರತ್

ವಿದ್ಯೆಗೆ ಮಹತ್ವವಿಲ್ಲ ಎನ್ನುವ ಮಾತು ಇಂದು ಸಾರ್ವತ್ರಿಕವಾಗುತ್ತಿದೆ. ಪರಿಣಾಮವಾಗಿ ಪೋಷಕರು ಮೂಲಭೂತ ವಿದ್ಯೆಯನ್ನು ನೀಡದೆ ಮಕ್ಕಳನ್ನು 'ಕೆಲಸ'ಕ್ಕೆಂದು ಮೈಸೂರು, ಬೆಂಗಳೂರು ಕಡೆಗೆ ರವಾನಿಸಿಬಿಡುತ್ತಾರೆ. ಅಂತಹವರ ಜೀವನ ಪರಿಪೂರ್ಣಗೊಳ್ಳದೆ ಸಮಾಜ ಕಂಟಕರಾಗುವ ಭಯ ರೂಪುಗೊಳ್ಳುತ್ತದೆ. ಒಬ್ಬ ವಿದ್ಯಾವಂತ ಮತ್ತು ಅವಿದ್ಯಾವಂತನ ನಡುವೆ ಗುಣ ನಡತೆಗಳಲ್ಲಿ ಅಜಗಜಾಂತರ ಸೂಕ್ಷ್ಮವಾಗಿ ಗಮನಿಸಿದಾಗ ಗೋಚರಿಸುತ್ತದೆ. ಆದರೆ ಕೆಲವೊಮ್ಮೆ ವಿದ್ಯಾವಂತರಾದವರೂ ಸಹ ಸಮರ್ಪಕ ಉದ್ಯೋಗ ದೊರೆಯದೇ ಹೋದಾಗ ಅವಿದ್ಯಾವಂತರಿಗಿಂತಲೂ ದೊಡ್ಡ ಸಮಾಜದ್ರೋಹಿಗಳಾಗಿ ಬಿಡುತ್ತಾರೆ. 'ಇದರ ಅವಶ್ಯಕತೆಯಿಲ್ಲ, ಮನುಷ್ಯ ತನ್ನ ಕಾಲಮೇಲೆ ಸಮರ್ಥವಾಗಿ ನಿಲ್ಲುವ ಶಕ್ತಿಯನ್ನು ಗಳಿಸಿಕೊಂಡೇ ಬಂದಿರುತ್ತಾನೆ. ಅದಕ್ಕೆ ಎಡೆಬಿಡದೆ ಶ್ರಮ ಮತ್ತು ನಿಗದಿತ ಯೋಜನೆ ಅಗತ್ಯ' ಎಂದು ಹೇಳುತ್ತಾರೆ ಮಡಿಕೇರಿಯ 'ವೆಸ್ಟರ್ನ್ ವುಡ್ ಇಂಡಸ್ಟ್ರೀಸ್' ಮಾಲೀಕರಾದ ಪಿ.ಎಸ್. ಭರತ್.

ಮೂಲತಃ ದಕ್ಷಿಣ ಕನ್ನಡದ ಕಾಸರಗೋಡಿನ ಸಮೀಪ ಪಳ್ಳಿಪುರದ ಕೊಟ್ಟ್ಯೋಳಿ ಮನೆತನಕ್ಕೆ ಸೇರಿದ ಇವರ ಕುಟುಂಬ ಬಹಳ ವರ್ಷಗಳ ಹಿಂದೆಯೇ ವಿರಾಜಪೇಟೆಯಲ್ಲಿ ಬಂದು ನೆಲಸಿದ ಪರಿಣಾಮ ಇವರ ಅಂಕಿತನಾಮ 'ಪಿ' ಎಂದಾಯಿತು. ಪಳ್ಳಿಪುರ ಸೀತಾರಾಮ ಮತ್ತು ಕಮಲ ದಂಪತಿಗಳ ಆರು ಜನ ಮಕ್ಕಳಲ್ಲಿ ಮೂರನೆಯ ಮಗನಾಗಿ ಜನಿಸಿದ ಇವರು ಬಹಳ ಬಡತನದಲ್ಲೇ ಬೆಳೆದವರು. 'ನಾನು ಹತ್ತನೇ ತರಗತಿಯಲ್ಲಿದ್ದಾಗ ಒಂದೇ ಜೊತೆ ಬಟ್ಟೆಯನ್ನು ವರ್ಷಪೂರ್ತಿ ಉಪಯೋಗಿಸಿದ್ದೆ' ಎಂದು ಅವರೇ ಅವರ ಬಡತನವನ್ನು ವಿವರಿಸುತ್ತಾರೆ. ಆದರೆ ಇಂದು ಮಡಿಕೇರಿಯ ಪ್ರಖ್ಯಾತ ಕೈಗಾರಿಕೋದ್ಯಮಿ



ಪಿ ಎಸ್. ಭರತ್ ಕುಟುಂಬ

ಯಾಗಿ ರಾಜ್ಯಪಾಲರ ಪ್ರಶಸ್ತಿ ಪಡೆದು ಜನಾಂಗಕ್ಕೆ ಕೀರ್ತಿ ತಂದ ಪುಟಿದೇಳುವ ಯುವ ನೇತಾರರೇ ಈ ಭರತ್.

ನಮ್ಮ ಜನಾಂಗದ ಬಗ್ಗೆ ಇವರನ್ನು ಮಾತಿಗೆಳೆದರೆ "ನಮ್ಮ ಜನಾಂಗ ಸುಮಾರು ಒಂದು ಶತಮಾನದಷ್ಟು ಹಿಂದಿದೆ. ಅದನ್ನು ಯಶಸ್ವಿಯಾಗಿ ಮುನ್ನಡೆಸುವ ನಾಯಕರ ಕೊರತೆಯಿದೆ. ಇಂದು ಚಲನಾತ್ಮಕವಾಗಿ ನಮ್ಮ ಸಂಸ್ಕೃತಿ, ಭಾಷೆಗಳನ್ನು ನಾವು ಕೊಂಡೊಯ್ಯಬೇಕು ಎಷ್ಟೋ ಹಿಂದುಳಿದ ಜನಾಂಗಗಳೇ ಇಂದು ಮೇಲುಸ್ತರವನ್ನು ಮುಟ್ಟಿರುವಾಗ ನಾವು ಕೆಳಸ್ತರದಲ್ಲಿರಲು ಆತ್ಮವಿಶ್ವಾಸದ ಕೊರತೆಯೇ ಕಾರಣ. ಇಂದು ನಮ್ಮಲ್ಲಿ ಹಲವರು 'ಅರೆಭಾಷೆ' ಮಾತನಾಡಲು ಹಿಂಜರಿದರೆ, ಇನ್ನು ಕೆಲವರು 'ಗೌಡ' ಎಂದುಕೊಳ್ಳಲು ನಾಚಿಕೆ ಪಡುತ್ತಿದ್ದಾರೆ ಇದೇ ದೊಡ್ಡ ದುರಂತ" ಎಂದು ನೊಂದು ನುಡಿಯುತ್ತಾರೆ. ನಮ್ಮ ಯುವಕರು ಹೆಚ್ಚಿನ ವಿದ್ಯಾಭ್ಯಾಸವನ್ನು ಹೊಂದಬೇಕು. ನಮ್ಮಲ್ಲಿ ಕೆಲವೇ ಮಂದಿ ಉನ್ನತ ಹುದ್ದೆಯಲ್ಲಿದ್ದಾರೆ ಅಂತಹವರಿಂದ ಸಮಾಜ ಬಹಳಷ್ಟು ನಿರೀಕ್ಷೆಯನ್ನು ಹೊಂದಿದ್ದರೂ ನಿರೀಕ್ಷಿತ ಫಲಮಾತ್ರ ಶೂನ್ಯ ಎನ್ನುವ ಅಭಿಪ್ರಾಯ ಭರತ್‌ರವರದು.

ಕೊಡಗು ಏಕೀಕರಣ ರಂಗದ ಕಾರ್ಯಕರ್ತರಾಗಿ, ಮಡಿಕೇರಿ ತಾಲ್ಲೂಕಿನ ವಕ್ತಾರರೂ ಆಗಿರುವ ಇವರು ಬಹಳಷ್ಟು ಹೋರಾಟವನ್ನು ಮಾಡಿದವರು. ಇವರನ್ನೊಳಗೊಂಡ ಯುವಕರ ತಂಡ ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸುವ ಸಲುವಾಗಿ 1990ರಲ್ಲಿ ನಾಗರೀಕ ವೇದಿಕೆಯನ್ನು ರಚಿಸಿಕೊಂಡು ಮಡಿಕೇರಿ ನಗರದಲ್ಲಿ ಯಾವುದೇ ಸಮಸ್ಯೆಗಳಿಗೆ ಇವರನ್ನೂ ಸಂಪರ್ಕಿಸುವಂತೆ ಕೋರಿದರು. ಜನರು ಅತ್ಯುತ್ತಮವಾಗಿ ಸ್ಪಂದಿಸಿದ್ದರು. ಇವರು

ಹೋರಾಟ ನಡೆಸಿ ಜನತೆಗೆ, ಸಮಾಜಕ್ಕೆ ನ್ಯಾಯ ಒದಗಿಸುತ್ತಿದ್ದರು. ಮುಂದೆ ಇದೇ ಸಂಘಟನೆ ಕೊಡಗು ಏಕೀಕರಣ ರಂಗಕ್ಕೆ ನಾಂದಿಯಾಯಿತು.

ಕೊಡಗು ಏಕೀಕರಣ ರಂಗದ ಬಗ್ಗೆ ಇವರ ಗಮನ ಸೆಳೆದಾಗ "ರಾಜಕೀಯ ರಹಿತ, ಧರ್ಮ ರಹಿತ, ಜಾತಿ ರಹಿತ, ಕೊಡಗಿನ ಅಭಿವೃದ್ಧಿಗೆ ಹೋರಾಡುವ ಜನತೆಯ ಹೋರಾಟವೇ ಕೊಡಗು ಏಕೀಕರಣ ರಂಗ. ಉತ್ತಮವಾದ ರಸ್ತೆ, ವಿದ್ಯಾಭ್ಯಾಸ, ಉತ್ತಮ ಆರೋಗ್ಯ ಕೇಂದ್ರ ಸ್ಥಾಪಿಸಿಕೊಡಿ. ನಾವು ಕೊಡುವ ತೆರಿಗೆಯ ಕಾಲುಭಾಗ ನಮಗೆ ಕೊಡಿ ಎಂದಷ್ಟೇ ನಾವು ಕೇಳುತ್ತೇವೆ." ಎಂದು ವಿವರಿಸುವ ಇವರು, ಕೊಡಗಿನ ಅಧಿಕಾರಿಗಳನ್ನು, ನಾಯಕರನ್ನು ಟೀಕಿಸಿ "ಹೊರ ಜಿಲ್ಲೆಯವರು ಇಲ್ಲಿಯ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಇಲ್ಲಿನ ಅಧಿಕಾರಿಗಳನ್ನು ಅವರೇ ಸಾಕುತ್ತಿದ್ದಾರೆ. ಜನತೆಯ ಕಣ್ಣಿಗೆ ಮಣ್ಣೆರಚುತ್ತಿದ್ದಾರೆ. ಇಲ್ಲಿಯ ಜನರಿಗೆ ಈ ಮಣ್ಣು ಮರಗಳ ಬೆಲೆ ಗೊತ್ತಿಲ್ಲ. ಅದಕ್ಕೆ ವಿದ್ಯಾಭ್ಯಾಸದ ಕೊರತೆ ಕಾರಣ. ವಿದ್ಯಾಭ್ಯಾಸ ಕೊರತೆಗೆ ಮೂಲಭೂತ ಸೌಲಭ್ಯದ ಕೊರತೆಯೇ ಕಾರಣ. ಇಂದು ಜಿಲ್ಲೆಯ ಗೋಣಿಕೊಪ್ಪದ ಕಡೆ ಅಭಿವೃದ್ಧಿ ಹೊಂದಿದ್ದರೆ ಭಾಗಮಂಡಲದ ಕಡೆ ಬಹಳ ಹಿಂದುಳಿದಿದೆ. ಇದನ್ನು ಆಳವಾಗಿ ಗಮನಿಸಿದರೆ ಸೂಕ್ತ ನಾಯಕರ ಕೊರತೆಯೇ ಕಾರಣ. ಉದಾಹರಣೆಗೆ ಮದೆನಾಡು—ಬೆಟ್ಟತ್ತೂರು — ಚೇರಂಬಾಣೆ ಮತ್ತು ಬೆಟ್ಟಗೇರಿ, ಅವಂದೂರು, ಬೆಟ್ಟತ್ತೂರು ರಸ್ತೆಯನ್ನೇ ನೋಡಿ. ಇನ್ನೂ ಸಾರಿಗೆ ಸಂಪರ್ಕದಿಂದ ದೂರ ಉಳಿದಿದೆ" ಎಂದು ದೀರ್ಘವಾಗಿ ವಿಶ್ಲೇಷಿಸುತ್ತಾರೆ.

ಇವರು ಬಾಯಲ್ಲಿ ಹೇಳುವುದಕ್ಕಿಂತ ಕೈಯಲ್ಲಿ ಮಾಡುವುದೇ ಹೆಚ್ಚು. ತನ್ನ ಕಿರಿಯ ವಯಸ್ಸಿನಲ್ಲೇ ಜನಸಂಘಟನೆಯನ್ನೂ ಮಾಡುತ್ತಿದ್ದಾಗ ಇವರ ಕೈಯಲ್ಲಿ ಕೆಲವೊಮ್ಮೆ ಹತ್ತು ರೂಪಾಯಿಯೂ ಇರುತ್ತಿರಲಿಲ್ಲವಂತೆ, ಆದರೆ ಜನರ ಮುಂದೆ ಮಾತ್ರ ನಾಯಕರಾಗಿದ್ದರಂತೆ. ಇದರಿಂದ ಎಚ್ಚೆತ್ತುಕೊಂಡು ಆರ್ಥಿಕವಾಗಿ ಮುನ್ನಡೆಯಬೇಕೆಂಬ ಉದ್ದೇಶದಿಂದ 'ವೆಸ್ಟರ್ನ್ ವುಡ್ ಇಂಡಸ್ಟ್ರೀಸ್'ನ್ನು ಸ್ಥಾಪಿಸಿ ನಿಗದಿತ ಯೋಜನೆ, ಅವಿರತ ಶ್ರಮದಿಂದ ಇಂದು ಶ್ರೀಮಂತಿಕೆಯ ಮೇಲಿದ್ದರೂ ನಿಸ್ವಾರ್ಥದ ಜನಸೇವೆಗೇನೂ ಕಡಿವಾಣ ಬೀಳಲಿಲ್ಲ. 'ಇವರು ಯುವಕರು, ಇವರ ಹಿಂದೆಯೂ ಯುವಕರ ಪರಿವಾರ. ಆದುದರಿಂದ ಯಾವ ರಾಜಕಾರಣಿಯಾಗಲಿ, ಯಾವ ಅಧಿಕಾರಿಯಾಗಲಿ, ಅವರ ಹಂಗಿಗೊಳಗಾಗದೆ ತಪ್ಪುಗಳನ್ನು ನೇರವಾಗಿ ಖಂಡಿಸಿ ಅದನ್ನು ಸರಿಪಡಿಸುವವರೆಗೂ ಹೋರಾಡುವ ಮನೋಭಾವ ಇವರದು ಮತ್ತು ಇವರ ರಂಗದ್ದಾಗಿದೆ.

'ಸರ್ಕಾರಿ ಉದ್ಯೋಗದಲ್ಲಿರುವವರು ಮಾಡಲಾಗದ ಕೆಲಸಗಳನ್ನು ಸ್ವಂತ ಉದ್ಯೋಗಗಳಲ್ಲಿ ತೊಡಗಿರುವವರು ಮಾಡಬಹುದು. ಈ ದಿಸೆಯಲ್ಲಿ ನಮ್ಮ ಯುವಕರು ಯಾರೇ ಮುಂದೆ ಬಂದರೂ, ನನ್ನ ಕೈಲಾದ ಸಹಕಾರ, ಸಲಹೆಗಳನ್ನು ನೀಡುತ್ತೇನೆ' ಎನ್ನುವ ಅವರು ಗೌಡ ಸಮಾಜವೂ ಸಹ ಯಾವುದೇ ರೀತಿಯಲ್ಲಿ ನನ್ನಿಂದ ಸೇವೆ, ಸಹಾಯ ಪಡೆಯಬಹುದು ಎನ್ನುತ್ತಾರೆ.

ಕುಂಬಳದಾಳು ಗ್ರಾಮದ ಕರ್ಣೇಯ್ಯನ ರಾಘವಯ್ಯನವರ ಪುತ್ರಿ ರೇಖಾರವರನ್ನು ವಿವಾಹವಾಗಿರುವ ಇವರು ತನ್ನ ಯಶಸ್ಸಿನ ಹಿಂದೆ ಹೆಂಡತಿಯ ಪಾತ್ರ ಸಾಕಷ್ಟು ಇದೆ ಎನ್ನುತ್ತಾರೆ. ಭರತ್‌ರವರಲ್ಲಿ ಚೇತನ ಶಕ್ತಿಯಿದೆ. ಯುವಕರನ್ನು ಸಂಘಟಿಸಿ ಹೋರಾಟಕ್ಕೆ ಪ್ರೇರೇಪಿಸುವ ಸಾಮರ್ಥ್ಯವಿದೆ. ಇದಕ್ಕೂ ಮಿಗಿಲಾಗಿ ಆ ಮನೋವೃತ್ತಿಯೂ ಇವರಲ್ಲಿ ಅಡಗಿದೆ. ಆದುದರಿಂದ ಸಂಕಷ್ಟದಲ್ಲಿ ನರಳುತ್ತಿರುವ ನಮ್ಮ ಜನಾಂಗ, ಸಂಸ್ಕೃತಿ ಇವರ ದಿವ್ಯ ಹಸ್ತ ಪ್ರಭಾವಕ್ಕೊಳಗಾಗಿ ಮತ್ತು ನೂತನವಾಗಿ ರಚಿತವಾದ "ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ"ಯ ಖಜಾಂಚಿಯಾಗಿರುವ ಶ್ರೀಯುತರ ಸೇವೆಯು ಗಗನದೆತ್ತರಕ್ಕೆ ಬೆಳೆದು ಬೆಳಗಲಿ ಎಂಬುದೇ 'ಸಂಗಾತಿ'ಯ ಹಾರೈಕೆ.

—ಪಟ್ಟಡ ಶಿವಕುಮಾರ್

[ಸಂಪಾದಕೀಯ ಪುಟದಿಂದ]

ನಂತರ ಚಿತ್ರರಂಗಕ್ಕೆ ಕಾಲಿಟ್ಟು ಅಲ್ಲಿ ಕಷ್ಟ ಅನುಭವಿಸಿದ್ದು ಇವರ ಧೀರ ಸಾಹಸತನದ ಪ್ರತೀಕವಾಗಿತ್ತು. ಕಟ್ಟಾ ಪರಿಸರವಾದಿಯಾಗಿದ್ದ ಕಾರಂತರ ಕಾರವಾರ ಬಳಿಯ ಕೈಗಾದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪಿಸುವುದರ ವಿರುದ್ಧ ಚಳುವಳಿಯಲ್ಲಿ ಮುಂಚೂಣಿಯಾಗಿದ್ದರು.

ಸ್ವಚ್ಛ ಬದುಕು, ಸುಂದರ, ಪ್ರಾಮಾಣಿಕ, ಆದರ್ಶ,ಶಿಸ್ತು,ನಿಯಮವನ್ನು ಪಾಲಿಸಿ ಮುಂಬರುವ ಯುವ ಪೀಳಿಗೆಗೆ ಮಾದರಿಯಾಗಿ, ಕಾಲ ಗರ್ಭದ ಇತಿಹಾಸವಾಗಿದ್ದಾರೆ. ಇವರಿಗೆ ನಮ್ಮ ಕೊನೆಯ ನಮನಗಳನ್ನು ಈ ಮೂಲಕ ಸಲ್ಲಿಸುತ್ತಿದ್ದೇವೆ.

ನಿತ್ಯ ಚಿಂತನ

ಪ್ರಾಮಾಣಿಕ ವ್ಯಕ್ತಿಯು ತನ್ನಲ್ಲಿ ತಾನು ತೃಪ್ತನಾಗುತ್ತಾನೆ, ಅನ್ಯರನ್ನು ತೃಪ್ತಿಪಡಿಸುತ್ತಾನೆ.

○ನಾಟೋಳನ ದೇವಮ್ಮ ಮೊಣ್ಣಪ್ಪ
ಮಡಿಕೇರಿ

ನೊಸ್ಟ್ರಾಡಮಸ್ ಮತ್ತು ಭಾರತ : ದೇಶದ ಭವಿಷ್ಯತ್ತಿನಲ್ಲಿ ಏನಡಗಿದೆ ?

ನಮಗೆ-ನಿಮಗೆಲ್ಲ ಗೊತ್ತಿರುವಂತೆ ಭವಿಷ್ಯತ್ತನ್ನು ಕಂಡವರಲ್ಲಿ ನೊಸ್ಟ್ರಾಡಮಸ್ ಅಗ್ರಗಣ್ಯ. ಅವನ ಭವಿಷ್ಯವಾಣಿಗಳನ್ನೊಳಗೊಂಡ “ಸೆಂಚುರೀಸ್” [ಇದು “ಸೆಂಚುರಿಯನ್” ಎಂದೂ ಹೆಸರುವಾಸಿ] ಎಂಬ ಪುಸ್ತಕವು ಜಗತ್ತಿನ ಅತ್ಯಧಿಕ ಮಾರಾಟದ ಪುಸ್ತಕಗಳಲ್ಲೊಂದು. ಈತ 400 ವರ್ಷಗಳ ಹಿಂದೆ ಬದುಕಿದ್ದ. ಆದರೂ ಕೂಡ ಮುಂದಿನ ಮೂರು ಸಾವಿರ ವರ್ಷಗಳಲ್ಲಿ ಸಂಭವಿಸಲಿರುವ ವಿದ್ಯಮಾನಗಳನ್ನು ಅರಿಯಲು ಈಗಲೂ ಜನರು ಈ ಪುಸ್ತಕಕ್ಕೆ ಮೊರೆ ಹೋಗುತ್ತಾರೆ.

ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆಯ ಬಗೆಗೂ ನೊಸ್ಟ್ರಾಡಮಸ್ ಭವಿಷ್ಯ ನುಡಿದಿದ್ದ ಎಂದು ಹೇಳಬಹುದು. ಅದನ್ನು ಅವನ ಮಾತುಗಳಲ್ಲಿಯೇ ಕೇಳಿ.

“ಮೂರು ಕಡೆಗಳಿಂದ ಸಮುದ್ರದಿಂದ ಆವರಿಸಲ್ಪಟ್ಟಿರುವ ದೇಶದ ಓರ್ವ ಬಲಿಷ್ಠ ಮಹಿಳೆಯು ತನ್ನ ವಿರೋಧಿಗಳಲ್ಲಿನ ಒಡಕಿನ ಪರಿಣಾಮವಾಗಿ ಮತ್ತೆ ಅಧಿಕಾರಕ್ಕೆ ಬರುತ್ತಾಳೆ. ಆಕೆ ತನ್ನ ವಯಸ್ಸಿನ 67ನೇ ವರ್ಷದೊಳಗಾಗಿ ತನ್ನ ಮನೆಯಲ್ಲಿಯೇ ತನ್ನ ಅಂಗರಕ್ಷಕರಿಂದಲೇ ಕೊಲೆಗೀಡಾಗುತ್ತಾಳೆ. ಶತಮಾನವು ಪೂರ್ಣಗೊಳ್ಳಲು ಇನ್ನೂ 16 ವರ್ಷಗಳಿರುವಾಗ ಈ ಘಟನೆ ಸಂಭವಿಸುತ್ತದೆ”.

ನೊಸ್ಟ್ರಾಡಮಸ್‌ನ ಈ ಭವಿಷ್ಯವಾಣಿಯು ಶ್ರೀಮತಿ ಇಂದಿರಾಗಾಂಧಿಯವರಿಗೆ ಸಂಬಂಧಿಸಿದ್ದು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅವರ ಹತ್ಯೆಯಾದದ್ದು 1984ರಲ್ಲಿ 21ನೇ ಶತಮಾನ ಪ್ರಾರಂಭವಾಗುವುದಕ್ಕೆ ಇನ್ನೂ 16 ವರ್ಷಗಳಿರುವಾಗ ಅವನ ಭವಿಷ್ಯವಾಣಿಯಲ್ಲಿ ಉಲ್ಲೇಖಿಸಿರುವ ಮೂರು ದಿಕ್ಕುಗಳನ್ನು ಸಮುದ್ರ ಆವರಿಸಿರುವ ದೇಶವೆಂದರೆ ಭಾರತ ಎಂಬುದು ನಿಸ್ಸಂದೇಹ. ಆತ ನೀಡಿರುವ ಇತರ ಎಲ್ಲ ವಿವರಗಳೂ ಇಂದಿರಾ ಗಾಂಧಿಯವರಿಗೇ ಅಕ್ಷರಶಃ ಅನ್ವಯಿಸುತ್ತವೆ.

ನ್ಯೊಸ್ಟ್ರಾಡಮಸ್‌ನ ಇನ್ನೊಂದು ಭವಿಷ್ಯವಾಣಿಯು, ಭಾರತೀಯರನ್ನು ಬಿಡಿ, ಹಿಂದೂಗಳೆನಿಸಿಕೊಂಡ ಎಲ್ಲರಿಗೂ ಹೆಮ್ಮೆಯನ್ನುಂಟು ಮಾಡುವಂತಹದು. ಆತ ಹೇಳುತ್ತಾನೆ.

“ಮನುಷ್ಯ ಜನಾಂಗದ ಹತ್ತರಲ್ಲೊಬ್ಬನ ಹತ್ಯೆಯಾಗುವ ಮಾರಣ ಹೋಮದೊಂದಿಗೆ ನೂತನ ಶತಮಾನವು ಆರಂಭವಾಗುತ್ತದೆ. ಆಗ ಅವತರಿಸುವ ಹಿಂದೂ ನಾಯಕನೊಬ್ಬ ಜಗತ್ತಿಗೆ ಮಾರ್ಗ ತೋರಿಸುತ್ತಾನೆ..ಮಂಗೋಲ [ಕೊರಿಯಾದವರೆನ್ನಿ]ರು ಝುಳಪಿಸುವ ಆಯುಧದಿಂದ ಸಾವುಗಳ ಸರಣಿ ಸಂಭವಿಸಿದ ನಂತರ ಜಾಗತಿಕ ಯುದ್ಧ ಪ್ರಾರಂಭವಾಗುತ್ತದೆ. ಭಾರತವು ಜಗತ್ತಿನ ಎರಡು ಬಲಿಷ್ಠ ರಾಷ್ಟ್ರಗಳೊಡನೆ ಹೊಂದಿರುವ ಸ್ನೇಹದ ಪರಿಣಾಮವಾಗಿ ಯುದ್ಧವು ಒಂದು ನೂತನ ತಿರುವನ್ನು ಪಡೆಯುತ್ತದೆ. ನೂತನ ಶತಮಾನದ ಐದನೆಯ ವರ್ಷದಲ್ಲಿ ಯುದ್ಧ ಅಂತ್ಯವಾಗುತ್ತದೆ. ಯೂರೋಪು ತನ್ನ ಧರ್ಮವನ್ನು ತ್ಯಜಿಸಿ ಜಗತ್ತಿನ ಅತಿ ಪ್ರಾಚೀನವಾದ ಧರ್ಮವನ್ನು ಅಪ್ಪಿಕೊಳ್ಳುತ್ತದೆ. ಈ ಯುದ್ಧದಲ್ಲಿ ಶೇ. 75ರಷ್ಟು ಮನುಕುಲ ನಾಶವಾಗುತ್ತದೆ. ದಕ್ಷಿಣ ಭಾರತದ ಓರ್ವ ಆಧ್ಯಾತ್ಮಿಕ ವ್ಯಕ್ತಿಯು ಜಗತ್ತಿಗೆ ಮಾರ್ಗದರ್ಶನ ನೀಡುತ್ತಾನೆ”.

ರಾಮಕೃಷ್ಣ ಪರಮಹಂಸರ ತತ್ವೋಪದೇಶದ ಎರಡನೆಯ ಸಂಪುಟದಲ್ಲಿ ಅವರು ಹೇಳಿರುವ ಮಾತು ನಮಗಿಲ್ಲಿ ನೆನಪಾಗುತ್ತದೆ. ಹಿಂದೂ ಧರ್ಮವು ಭವಿಷ್ಯತ್ತಿನಲ್ಲಿ ಜಗತ್ತಿನ ಧರ್ಮವಾಗುತ್ತದೆ ಎಂದು ಪರಮಹಂಸರು ನುಡಿಯುತ್ತಾರೆ. ನಮ್ಮ ವಿಚಾರವಾದಿಗಳೂ, ಹಿಂದೂ ಧರ್ಮದ ದ್ವೇಷಿಗಳೂ ಯೋಚನೆ ಮಾಡಬೇಕಾದ ಸಂಗಾತಿ ಇದು.

ಇನ್ನು ಅಮೆರಿಕೆಯ ಜ್ಯೋತಿಷಿ ಜೀನ್ ಡಿಕ್ಸನ್ನಳ ವಿಷಯ. ಆಕೆಯನ್ನು ಅರ್ಧರ್ಧ ಜ್ಯೋತಿಷಿ [ಫಿಫ್ಟಿ–ಫಿಫ್ಟಿ] ಎಂದು ಕರೆಯಲಾಗುತ್ತಿತ್ತು. ಆಕೆ ನುಡಿಯುತ್ತಿದ್ದ ಭವಿಷ್ಯಗಳು ಅರ್ಧ ನಿಜವಾಗುತ್ತಿದ್ದವು ಎಂಬುದು ಇದಕ್ಕೆ ಕಾರಣ. ಆಕೆ ನುಡಿದ ಅತ್ಯಂತ ಮಹತ್ವದ ಭವಿಷ್ಯವಾಣಿಗಳಲ್ಲೊಂದೆಂದರೆ, ಅಮೆರಿಕೆಯ ಅಧ್ಯಕ್ಷ ಕೆನಡಿಯವರ ಹತ್ಯೆ. ಹಾಲಿವುಡ್‌ನ ಸುಪ್ರಸಿದ್ಧ ತಾರೆ ಮರಿಲಿನ್ ಮನ್ರೋಳ ಸಾವನ್ನು ಕುರಿತೂ ಆಕೆ ಖಚಿತ ಭವಿಷ್ಯ ನುಡಿದಿದ್ದಳು.

ಭಾರತಕ್ಕೆ ಸಂಬಂಧಿಸಿದಂತೆಯೂ ಆಕೆ ನುಡಿದಿದ್ದಳು—ಭಾರತವು ವಿಭಜನೆಗೊಳ್ಳುತ್ತದೆ ಎಂದು ಆಕೆ 1945ರಲ್ಲೇ ಅಮೆರಿಕದಲ್ಲಿದ್ದ ಭಾರತದ ಸೇನಾ ಮುಖ್ಯಸ್ಥ ಶೇರ್ ಅಲಿಯವರ ಬಳಿ ಭವಿಷ್ಯ ನುಡಿದಿದ್ದಳು. 1948ರಲ್ಲಿ ಮಹಾತ್ಮಾ ಗಾಂಧಿಯವರನ್ನು ಹಿಂದೂ ಕರ್ಮಠನೊಬ್ಬ ಹತ್ಯೆಗೈಯುತ್ತಾನೆ ಎಂದು ಆಕೆ ಒಂದು ವರ್ಷ ಮೊದಲೇ ಕರಾರುವಾಕ್ಕಾಗಿ ಹೇಳಿದ್ದಳು.

ಅಂದ ಹಾಗೆ ಜವಾಹರಲಾಲ ನೆಹರೂರವರು ಈಕೆಯ ಭವಿಷ್ಯ ನುಡಿಗಳಲ್ಲಿ ಆಸಕ್ತರಾದಂತಿತ್ತು. ತಮ್ಮ ನಂತರ ದೇಶಕ್ಕೆ ಯಾರು ಪ್ರಧಾನಮಂತ್ರಿಯಾಗುತ್ತಾರೆ ಎಂದು ಅವರು ಒಮ್ಮೆ ಡಿಕ್ಸನ್ನಳನ್ನು

[8ನೇ ಪುಟ ನೋಡಿ]

ಐಕೋಳ ಗ್ರಾಮದಲ್ಲಿ ವಿಜೃಂಭಿಸಿದ ಯುವಕ ಸಂಘಗಳ ವಾರ್ಷಿಕೋತ್ಸವ

ಐಕೋಳ ಶ್ರೀ ಅಯ್ಯಪ್ಪ ಯುವಕರ ಸಂಘ ಮತ್ತು ಯುವತಿ ಮಂಡಳಿಗಳ ಎರಡನೇ ವರ್ಷದ ವಾರ್ಷಿಕೋತ್ಸವ 16–11–97ರಂದು ಜರುಗಿತು.

ಕಾಫಿ ಬೆಳೆಗಾರರಾದ ಪಣಿಕಂಡ್ರ ಭೀಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮವನ್ನು ಮೂರ್ನಾಡು ಗ್ರಾಮಪಂಚಾಯಿತಿಯ ಮಾಜಿ ಅಧ್ಯಕ್ಷೆ ಪಳಂಗಂಡ ಬೆಳ್ಳಿಯಪ್ಪ ಉದ್ಘಾಟಿಸಿದರು. ಹಾಲಿ ಗ್ರಾಮ ಪಂಚಾಯಿತಿ ಸದಸ್ಯೆ ಕುಂಡಡ್ಕನ ಕುಮಾರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕೊಂಪುಳೀರ ಲಕ್ಷ್ಮಪತಿ ಅವರು ವರದಿ ವಾಚಿಸಿದರು. ಉಳುವಾರನ ಶೀಲಾಪೊನ್ನಪ್ಪ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕೊಂಪುಳೀರ ಸುಬ್ಬಯ್ಯ ಅವರು ಸ್ವಾಗತಿಸಿದರು. ವಾರ್ಷಿಕೋತ್ಸವದ ಅಂಗವಾಗಿ ಗ್ರಾಮಸ್ಥರಿಗೆ ಕ್ರೀಡಾ ಕಾರ್ಯಕ್ರಮ, ರಸಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಸಮಾರೋಪ ಸಮಾರಂಭ ಅಪರಾಹ್ನ 3–30ಕ್ಕೆ ಕೊಂಪುಳೀರ ನಿರ್ಮಲ ಉಲ್ಲಾಸ ಅವರ ಗೀತೆಯೊಂದಿಗೆ ಆರಂಭವಾಯಿತು. ಮುಖ್ಯ ಅತಿಥಿಗಳಾಗಿ ಮೂರ್ನಾಡು ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷ ಮುಂಡಂಡ ಕಾವೇರಪ್ಪ, ಕಿಗ್ಗಾಲು ಯುವಕ ಸಂಘದ ಅಧ್ಯಕ್ಷ ಗಿರೀಶ್ ಭಾಗವಹಿಸಿದ್ದರು. ಸಂಘದ ಅಧ್ಯಕ್ಷ ಗಣೇಶ್ ಬೋಪಯ್ಯ ಹಾಗೂ ಯುವತಿ ಮಂಡಳಿಯ ಅಧ್ಯಕ್ಷೆ ಚಂದ್ರಮ್ಮ ಅವರುಗಳು ಮಾತನಾಡಿದರು. ಸಂಘದ ಸದಸ್ಯ ತಡಿಯಪ್ಪನ ಚಂದ್ರಶೇಖರ್ ಅವರು ಸ್ವಾಗತಿಸಿದರು.

ಮಡಿಕೇರಿ ಐ.ಟಿ.ಐ. ಪರೀಕ್ಷೆಯಲ್ಲಿ ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದ ಸಂಘದ ಸದಸ್ಯ ಪೊನ್ನಚ್ಚನ ಯತೀಶ್ ರಾಘವಯ್ಯ ಅವರನ್ನು ಸನ್ಮಾನಿಸಲಾಯಿತು. ಕಾರ್ಯದರ್ಶಿ ಸುಬ್ಬಯ್ಯ ವಂದಿಸಿದರು. ಸಭೆಯಲ್ಲಿ ಮಡಿಕೇರಿಯ ಗೌಡ ಮಹಿಳಾ ಒಕ್ಕೂಟದ ಪದಾದಿಕಾರಿಗಳು ಹಾಜರಿದ್ದರು. ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷರಾದ ಕೊಂಪುಳೀರ ಗಣೇಶ್ ಬೋಪಯ್ಯರವರು ನಿರೂಪಿಸಿದರು.

ಹಾಲು ಕಾಯಿಸುವಾಗ ಉಕ್ಕಿ ಸುರಿಯುತ್ತದೆ ಏಕೆ ?

ಹಾಲನ್ನು ಕಾಯಿಸುವಾಗ ಅದು ಏಕೆ ಉಕ್ಕಿ ಹರಿಯುತ್ತದೆ. ಹಾಲು ಚೆನ್ನಾಗಿ ಕಾದ ಬಳಿಕ ಪಾತ್ರೆಯಲ್ಲಿ ಮೇಲಿನವರೆಗೆ ಬಂದು ಉಕ್ಕಿ ಸುರಿಯುತ್ತದೆ. ಅದು ಏಕೆ ಹೀಗಾಗುತ್ತದೆ ಗೊತ್ತೆ ?

ನೀರಿನಂತೆ ಹಾಲು ಒಂದು ಸರಳ ಪದಾರ್ಥವಲ್ಲ. ಇದು ಒಂದು ಕಾಲಾಯ್ಡ್ ಇದರಲ್ಲಿ ಪ್ರೋಟೀನು, ಸಕ್ಕರೆ ಮತ್ತು ಜಿಡ್ಡಿನ ಪದಾರ್ಥ ಇರುತ್ತದೆ. ಹಾಲನ್ನು ನಿಧಾನವಾಗಿ ಕಾಯಿಸಿದಾಗ ಪ್ರೋಟೀನುಗಳು ಮತ್ತು ಜಿಡ್ಡು ಪದಾರ್ಥಗಳು ಪ್ರತ್ಯೇಕಗೊಳ್ಳುತ್ತದೆ. ಇವು ಹಾಲಿಗಿಂತ ಹಗುರ. ಆದ್ದರಿಂದ ಇವು ಮೇಲ್ಭಾಗದಲ್ಲಿ ಸಂಗ್ರಹವಾಗಿ ಒಂದು ಪದರ ರಚಿತವಾಗುತ್ತದೆ. ಈ ಪದರವನ್ನೇ ನಾವು ಕೆನೆ ಎನ್ನುತ್ತೇವೆ.

ಹಾಲನ್ನು ಕಾಯಿಸಿದಾಗ ಸ್ವಲ್ಪ ನೀರು ನೀರಿನ ಹನಿಯಾಗಿ ಪರಿವರ್ತಿತವಾಗುತ್ತದೆ. ಹಾಲಿನ ಮೇಲ್ಪದರ ಕೆನೆಯಿಂದ ಆವೃತವಾಗುವ ಕಾರಣ, ಈ ನೀರಿನ ಹನಿಗಳು ಅಥವಾ ನೀರಾವಿ ಅವರ ಕೆಳಗೆ ಉಳಿದುಕೊಳ್ಳುತ್ತದೆ. ಹಾಲನ್ನು ಮತ್ತಷ್ಟು ಕಾಯಿಸಿದಾಗ, ಈ ನೀರಿನ ಹನಿಗಳು ಮತ್ತಷ್ಟು ಹಿಗ್ಗಿ ಮೇಲ್ಭಾಗದಲ್ಲಿ ಗಟ್ಟಿಯಾದ ನೊರೆ ಉಂಟಾಗುತ್ತದೆ. ಕಡೆಗೆ ಕೆಳಗೆ ಉಳಿದುಕೊಂಡ ನೀರಿನ ಹನಿಗಳು ಈ ಕೆನೆಯ ಪದರವನ್ನು ಮೇಲಕ್ಕೆ ಎತ್ತುತ್ತವೆ. ಆಗ ಆ ಪದರ ಒಡೆಯುತ್ತವೆ ನೀರಿನ ಹನಿಗಳು ತಪ್ಪಿಸಿಕೊಂಡು ಹೋದಂತೆ, ತುಂಬ ಕೆನೆ ಹಾಗೂ ಹಾಲು ಉಕ್ಕಿ ಕೆಳಕ್ಕೆ ಹರಿಯುತ್ತದೆ.

ಹಾಲು ಉಕ್ಕದಂತೆ ತಡೆಯುವುದು ತುಂಬ ಸುಲಭ. ಈ ನೀರಾವಿ ಹೊರ ಹೋಗಲು ಒಂದು ಮಾರ್ಗವನ್ನು ಕಲ್ಪಿಸಿಕೊಟ್ಟರೆ ಸಾಕು. ಈ ಉದ್ದೇಶಕ್ಕಾಗಿ ನಾವು ಉದ್ದವಾಗಿರುವ ಒಂದು ಚಮಚವನ್ನು ಹಾಲಿನ ಪಾತ್ರೆಯೊಳಗೆ ಇಳಿಬಿಡಬಹುದು. ಇದರಿಂದ ಈ ಚಮಚದ ಹಿಡಿಯ ಮೂಲಕ ನೀರಿನ ಹನಿಗಳು ತಪ್ಪಿಸಿಕೊಂಡು ಹೋಗಲು ಅವಕಾಶವಾಗುತ್ತದೆ. ಇದು ಕೆನೆಯ ಪದರದ ಕೆಳಗೆ ನೀರಿನ ಹನಿಗಳು ಶೇಖರವಾಗಿ ಹಾಲು ಉಕ್ಕಿ ಬರುವುದಕ್ಕೆ ಕಾರಣವಾಗಿರುವುದನ್ನು ತಪ್ಪಿಸಬಹುದು.

○**ಕೊಡಕಂಡಿ ಅನಿತಾ ನಂಜುಂಡ,** ಚೇರಂಬಾಣೆ

ಮಲೆನಾಡಿನ ಮಡುವಲ್ಲಿ

ಹೇಗೂ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆ ನಿಲ್ಲುತ್ತಿದ್ದಂತೆ ನಾಟಿ ಕೆಲಸ ಮುಗಿದಿರುತ್ತದೆ. ದನಕರುಗಳು ತಾವು ಹಸಿವನ್ನು ನೀಗಿಸಿಕೊಳ್ಳಲೆಂದು ಧಾವಿಸಿರುತ್ತವೆ. ಅವುಗಳ ಜೀವನ ಅಂದರೆ ಅವುಗಳು ಮರಳಿ ಬರುತ್ತವೆಯೋ ಎಂಬ ಹೆದರಿಕೆಯಲ್ಲಿ ಇರುತ್ತಾರೆ ಮನೆಯವರು. ಹುಲಿರಾಯನ ಭಯಂಕರ ಆವೇಶಭರಿತ ಆಕ್ರಮಣ ಅವುಗಳ ಮೇಲೆ ಆದಾಗ ಅವುಗಳು ಹೇಗೆ ಪ್ರಾಣ ಬಿಡುತ್ತವೆಯೋ

○ಕೋಡಿ ಆರ್. ಹರೀಶ, ಚೇರಂಗಾಲ

ನಮಗೆ ಊಹಿಸಲು ಅಸಾಧ್ಯ. ಅದೇ ರೀತಿ ನಮ್ಮ ಹಳ್ಳಿ ಜನರ ಜೀವನ ಮಟ್ಟ ಇತ್ತ ಹೊಟ್ಟೆಗೆ ಆದರೆ ಬಟ್ಟೆಗೆ ಸಾಲದು. ಬಟ್ಟೆಗೆ ಆದರೆ ಹೊಟ್ಟೆಗೆ ಸಾಲದು ಏಕೆಂದರೆ ಅತ್ತ ಪಟ್ಟಣ ಪ್ರದೇಶದಲ್ಲಿ ಶ್ರೀಮಂತ ವರ್ಗದವರು ಶಮ್ಮ ಶ್ರೀಮಂತರು ಅಪಹಾಸ್ಯದಲ್ಲಿ ಇದ್ದರೆ, ಇತ್ತ ಹಳ್ಳಿ ಜನರ ಜೀವನ ಇಂತಾಗಿರುತ್ತದೆ. ಹಳ್ಳಿಯಲ್ಲಿ ಅತೀ ಶ್ರೀಮಂತ ವರ್ಗವೆಂದರೆ ತಿನ್ನುವುದಕ್ಕೆ ತಕ್ಕ ಭತ್ತ ಬರುತ್ತಿದ್ದು, 100ರಿಂದ 150 ಕೆ.ಜಿಯಷ್ಟು ಏಲಕ್ಕಿಯು ಬರುತ್ತಿದ್ದು ಸ್ವಲ್ಪ ಮಟ್ಟಿಗೆ ಜೇನು ಇದ್ದು 20 ಮೂಟೆ [50 ಕೆ.ಜಿ.ಗೆ 1 ಮೂಟೆ] ಕಾಫಿಯು ಇದ್ದು ಅಲ್ಪ ಸ್ವಲ್ಪ ಪಣಕ್‌ಪುಳಿ ಇದ್ದವನೆ ಶ್ರೀಮಂತ ಆದರೆ ಬಡಜನ ಎಂದವರ ಸ್ಥಿತಿ ಹೇಗಿರುತ್ತದೆ ಎಂಬುವುದು ಈಗ ನೋಡೋಣ. ಈ ಮೇಲೆ ತಿಳಿಸಿದಂತೆ ಹೊಟ್ಟೆಗೆ ಆದರೆ ಬಟ್ಟೆಗೆ ಸಾಲದು ಎನ್ನುವ ಸ್ಥಿತಿ. ಹೇಗೆ ಆದರೂ ದೇವರು ತನ್ನನ್ನು ಒಬ್ಬ ಬುದ್ಧಿಜೀವಿ ಎಂದು ಹುಟ್ಟಿಸಿದ ಮೇಲೆ ತಾನು ತನ್ನ ಹೆಂಡತಿ ಮಕ್ಕಳೆಂಬ ಮೋಹಕ್ಕೆ ಒಳಗಾಗುತ್ತಾನೆ. ಅದಕ್ಕಾಗಿ ಅವನು ಇತರೆ ಉತ್ಪತ್ತಿ [ಕಾಡಿನಲ್ಲಿ ಗೌಪ್ಯವಾಗಿರುವ ವಸ್ತುಗಳ] ಗಳ ಮೊರೆ ಹೋಗುತ್ತಾನೆ. ಮಲೆನಾಡಿನ ಮರಗಳೆಂದರೆ ಭಯಂಕರ ಹೆದರಿಕೆ ಅದರಲ್ಲಿ ಗಡ್ಡೆಗಳಂತೆ ಇಳಿದು ನಿಂತಿರುವ ಜೇನುಗಳನ್ನು ಕುಯ್ಯಲು ಮಾನವ ಅದೆಷ್ಟು ಸಾಹಸ ಮಾಡುತ್ತಾನೆ. ಅದು ಹೇಗೆಂದರೆ ಹಿಲೇರಿ, ತೇನ್‌ಸಿಂಗ್ ನಂತವರು ಹಿಮಾಲಯ ಪರ್ವತವನ್ನು ಹತ್ತುವಾಗ ಹೇಗೆ ಕಷ್ಟಪಟ್ಟರೋ ಹಾಗೆ. ಮನುಷ್ಯನಾದ ತಾನು ಅವುಗಳಿಗೆ ಹಾನಿ ಮಾಡಲು ಬೆಂಕಿ ಹತ್ತಿಸಿದರೆ ಅವುಗಳು ಭಯಂಕರವಾದ ಆಕ್ರಮಣ ಮಾಡಿದರೆ ತೀರಿತು, ಮನುಷ್ಯನ ಪ್ರಾಣ ಆಕಾಶಕ್ಕೇರುತ್ತದೆ. ಏಕೆಂದರೆ ಪರ್ವತದೆತ್ತರ ಬೆಳೆದು ನಿಂತಿರುವ ಮರದಿಂದ ಕೆಳಕ್ಕೆ ಬಿದ್ದರೆ ಅವರನ್ನು ಹುಡುಕಲು ಅಸಾಧ್ಯವೆನಿಸುತ್ತದೆ. ಇದು ಅಲ್ಲದೆ ಸೀಗೆಕಾಯಿ, ಚಂಗರೆಕಾಯಿ ಎನ್ನುವ ಇತರ ವಸ್ತುಗಳ ಸೇರ್ಪಡೆಗೂ ಇದೇ ಸ್ಥಿತಿ ಅನುಭವಿಸಬೇಕಾಗುತ್ತದೆ.

ಅಲ್ಲದೆ ಒಂದೆಡೆ ವೀರಪ್ಪನ್ ಜನರ ಏಳಿಗೆಗಾಗಿ ಪ್ರಾಣಿಗಳನ್ನು ಕೊಂದರೆ [ಆನೆ] ಇತ್ತ ಜನರು ತಮ್ಮ ಹೊಟ್ಟೆ ಹೊರೆಯಲು ತಮ್ಮ ಕೋವಿಗಳಿಗೆ ತೋಟೆಗಳನ್ನು ತುಂಬಿಸಿ ಪ್ರಾಣಿಗಳನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲುತ್ತಾರೆ. ಮಲೆನಾಡಿನ ಮಡುಗಳ ನಡುವೆ ಪ್ರಪಂಚ ಬೆಳಗುವ ಸೂರ್ಯ ತನ್ನ ದೈನಂದಿನ ಅಂತ್ಯಕ್ರಿಯೆಯಲ್ಲಿ ತೊಡಗುವ ಭಾಗ್ಯ ಅವರಿಗೆಲ್ಲಿರುತ್ತದೆ. ಹಳ್ಳಿಯ ಬಡಜನರೆಂದೇ ಇರುವವರ ಏಳಿಗೆಗಾಗಿ ಕೇಂದ್ರ ಸರಕಾರ ಬಿಡುಗಡೆಮಾಡುವ ಸವಲತ್ತನ್ನು ಬಡಜನರೇ ಆರಿಸಿ ಕಳುಹಿಸಿದ ಜನರೇ ತಿಂದು ತೇಗುತ್ತಾರೆ. ಇಂತಹ ಮಲೆನಾಡಿನ ಜನರ ಪರಿಸ್ಥಿತಿಯು "ತೋಳ ಕುರಿಮರಿಗೆ ಸೋತು", "ಹುಲಿ ಹಸುವಿಗೂ ಸೋತು", "ಗೋವಿನ ಹಾಡು ಜೀವ ಪಡೆಯಿತು ನೋಡು" ಎಂಬ ಹಾಡು ಎಂದು ಸೂಚಿಸುವಂತಾಗುತ್ತೇನೋ ? ○

ನಗೆ ಹನಿಗಳು

ಅಮ್ಮ : ಕಿಟ್ಟು ಪರೀಕ್ಷೆ ಸುಲಭ ಇತ್ತಾ ?

ಕಿಟ್ಟು : ಸುಲಭ ಇತ್ತಮ್ಮ

ಅಮ್ಮ : ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬರೆದಿದ್ದೀಯಾ ?

ಕಿಟ್ಟು : ಬರೆದಿದ್ದೀನಿ ಅಮ್ಮ. ಆದರೆ...

ಅಮ್ಮ : ಆದರೆ ಏನು ?

ಕಿಟ್ಟು : ಕೊನೆಯ ಪ್ರಶ್ನೆಗೆ ಉತ್ತರ ಬರೆಯಲಿಲ್ಲ

ಅಮ್ಮ : ಏಕೆ ?

ಕಿಟ್ಟು : ಪಕ್ಕದವನು ತೋರಿಸಲಿಲ್ಲ.

○ **ಪಟ್ಟಡ ವೀಣಾ ಬೋಜಪ್ಪ,**
ಅಮಂದೂರು

ಒಗಟು

1. ಕರೆಸಿಕೊಂಡು ಬರುವವರು ಇಬ್ಬರು
2. ಕರೆಸಿಕೊಳ್ಳದೇ ಬರುವವರು ಇಬ್ಬರು
3. ಬಂದರೆ ಹೋಗದೇ ಇರುವವರು ಇಬ್ಬರು
4. ಹೋದರೆ ಬರದೇ ಇರುವವರು ಇಬ್ಬರು

ಉತ್ತರ : 1. ಗೌರವ, ಅಗೌರವ
2. ಯಮದೂತರು
3. ಕೀರ್ತಿ, ಅಪಕೀರ್ತಿ
4. ಮಾನ, ಪ್ರಾಣ

○ **ಬಾಡನ ಎಸ್. ಶಕುಂತಲ,**
ಮೈಸೂರು

[5ನೇ ಪುಟದಿಂದ]

ಕೇಳಿದ್ದರಂತೆ. ಅದಕ್ಕೆ ಅಕೆ "ಕುಳ್ಳಗಿರುವ ವ್ಯಕ್ತಿ ಪ್ರಧಾನಿಯಾಗುತ್ತಾನೆಂದೂ, ಆತನ ಅಡ್ಡ ಹೆಸರು 'ಎಸ್' ನಿಂದ ಪ್ರಾರಂಭವಾಗುವುದೆಂದೂ" ಭವಿಷ್ಯ ನುಡಿದಿದ್ದಳು. ಹಾಗೆಯೇ ಆಯಿತು. ವಾಮನಮೂರ್ತಿ ಲಾಲ ಬಹದ್ದೂರ್‌ಶಾಸ್ತ್ರಿಯವರು ನೆಹರೂರವರ ಉತ್ತರಾಧಿಕಾರಿಯಾದರು.

ಗ್ರಾಮಾಂತರ ಪ್ರದೇಶಕ್ಕೆ ಸೇರಿದ ವ್ಯಕ್ತಿಯೊಬ್ಬ ಭಾರತದಲ್ಲಿ ಅಧಿಕಾರಕ್ಕೆ ಬರುತ್ತಾನೆ ಹಾಗೂ ಆತ ಮಹಾತ್ಮಾ ಗಾಂಧಿಯವರಷ್ಟೇ ಪ್ರಸಿದ್ಧನಾಗುತ್ತಾನೆ ಎಂದು ಡಿಕ್ಸನ್ ಭವಿಷ್ಯ ನುಡಿದಿದ್ದಾಳೆ. ಇದನ್ನು ಮಾತ್ರ ಕಾದು ನೋಡಬೇಕು.

ಕಾಕತಾಳಿಯವೆಂಬಂತೆ ನೊಸ್ಟ್ರಾಡಮುಸ್‌ನ ಭವಿಷ್ಯವಾಣಿಗಳನ್ನು ಬೆಂಗಳೂರಿನ ಜ್ಯೋತಿಷಿ ಬಿ. ವಿ. ರಾಮನ್ ಹಾ ಗೂ ಗಾಯತ್ರಿದೇವಿ ವಾಸುದೇವ್ ಸಂಪಾದಿಸಿರುವ "ಪ್ಲಾನೆಟ್ಸ್ ಅಂಡ್ ವರ್ಲ್ಡ್ ವಾರ್" [ಗ್ರಹಗಳು ಮತ್ತು ಮುಂದಿನ ಜಾಗತಿಕ ಯುದ್ಧ] ಎಂಬ ಗ್ರಂಥವಲ್ಲಿ ಪುನರುಚ್ಚರಿಸಲಾಗಿದೆ. ಈ ಗ್ರಂಥದ ಪ್ರಕಾರ ಕ್ರಿ. ಶ. 1998 ರಿಂದ 2000ದವರೆಗಿನ ಅವಧಿಯು ಅತ್ಯಂತ ಸ್ಫೋಟಕವಾಗಿರುತ್ತದೆ. ವಿಶ್ವಶಾಂತಿಯು ಗಂಡಾಂತರಕ್ಕೆ ಗುರಿಯಾಗುತ್ತದೆ. ಮುಖ್ಯವಾಗಿ ಇಂದಿನಿಂದ 2 ವರ್ಷಕ್ಕೆ ಸರಿಯಾಗಿ [2000ನೇ ಇಸ್ವಿಯು] ಹಿಂಸಾಚಾರದಿಂದ ಕೂಡಿರುತ್ತದೆ. ಗ್ರಹಗಳ ಸ್ಥಾನಗಳು ನಿಜವಾಗಿಯೂ ಪ್ರಭಾವ ಬೀರುವುದಾದರೆ ಈ ಜಗತ್ತು ನುಚ್ಚುನೂರಾಗುತ್ತದೆ. ಇದೇ ಬ ಗೆ ಯ ಭವಿಷ್ಯವಾಣಿಗಳನ್ನು ನಾವು 'ಬೃಹತ್ ಸಂಹಿತೆ'ಯಲ್ಲೂ ಕಾಣಬಹುದು.

ಪಾಶ್ಚಿಮಾತ್ಯ ಕ್ರಿಶ್ಚಿಯನ್ ಶಕ್ತಿಗಳು ಹಾಗೂ ಪಶ್ಚಿಮ ಏಷ್ಯಾದ ಇಸ್ಲಾಂ ಶಕ್ತಿಗಳ ನಡುವೆ ಘರ್ಷಣೆ ಸಂಭವಿಸುತ್ತದೆ. ಇಸ್ಲಾಂ ಒಕ್ಕೂಟವು ಕ್ರೈಸ್ತ ರಾಷ್ಟ್ರಗಳ ವಿರುದ್ಧ ಧರ್ಮಯುದ್ಧವನ್ನೇ ಸಾರುತ್ತದೆ. ಇದು ಯುದ್ಧದ ದಳ್ಳುರಿಗೆ ಕಾರಣವಾಗುತ್ತದೆ. ಗ್ರಹಗಳ ಪ್ರಭಾವವು ಮಧ್ಯಪ್ರಾಚ್ಯದಲ್ಲಿ ಕೇಂದ್ರೀಕೃತವಾಗಿರುವುದರಿಂದ ಅರಬ್ ಶಕ್ತಿಯು ದುಷ್ಪರಿಣಾಮಕ್ಕೆ ಗುರಿಯಾಗುತ್ತದೆ. ಅದರ ಉದ್ಧಟತನಕ್ಕೆ ಕಡಿವಾಣ ಬಿದ್ದು, ಭಾರತಕ್ಕಿರುವ ಬೆದರಿಕೆಯ ತೀವ್ರತೆ ಕುಗ್ಗುತ್ತದೆ.

ಈ ಲೇಖನ ನಿಮ್ಮ ಕೈಸೇರುವುದರೊಳಗೆ ನಿಮಗೆ ಬೇರೆ ಪತ್ರಿಕೆಗಳಿಂದ ವಿಷಯ ತಿಳಿದಿರಬಹುದು. ಆದರು ನಮ್ಮ ಈ ಲೇಖನ ನಿಮಗೆ ಹೇಗನ್ನಿಸುತ್ತದೆ ತಿಳಿಸಿ.

—ಉಪಸಂಪಾದಕ

"ಥ್ಯಾಂಕ್ಸ್"ನ ಬಳಕೆ

ಶಿಷ್ಟಾಚಾರದ ಹೆಸರಿನಲ್ಲಿ ನಾವು ಕೆಲವು ವಿಶೇಷ ಪದಗಳನ್ನು ಬಹಳ ಅಗ್ಗ ಮಾಡಿಬಿಡುತ್ತೇವೆ. ಈ ಅವಸ್ಥೆಗೆ ಬಲಿ ಬೀಳುವುದು ಆಂಗ್ಲ ಪದಗಳೇ ಹೆಚ್ಚು. ಉದಾಹರಣೆಗೆ ಯಾ ವು ದೇ ಸಣ್ಣ ಸಹಾಯ ಪಡೆದುಕೊಂಡಾಗ ಥ್ಯಾಂಕ್ಸ್ ಹೇಳಬೇಕು, ಇಲ್ಲದಿದ್ದರೆ ಆತನನ್ನು ಅನಾಗರಿಕ ಎಂದು ಜರಿಯಲಾಗುತ್ತದೆ. ನಮಗೆ ಯಾರಾದರೂ ಥ್ಯಾಂಕ್ಸ್ ಹೇಳಿದರೆ ನಾವು ಪ್ರತಿಯಾಗಿ ವೆಲ್‌ಕಂ ಹೇಳಬೇಕು ಇಲ್ಲದಿದ್ದರೆ ನಮ್ಮಲ್ಲೂ ನಾಗರಿಕತೆ ಉಚ್ಛ್ರಾಯ ಸ್ಥಿತಿಯಲಿಲ್ಲ ಎಂದುಕೊಳ್ಳುತ್ತಾರೆ. ಥ್ಯಾಂಕ್ಸ್‌ಗೆ ಪ್ರತಿಯಾಗಿ ನೋ ಮೆನ್‌ಶನ್ ಅಥವಾ ಮೆನ್‌ಶನ್ ನಾಟ್ ಎನ್ನುವುದು ರೂಢಿಯಲ್ಲಿದೆ. ಈ ಶಬ್ದಗಳು ಸ್ವಲ್ಪ ಗಡಸು ಅನಿಸುತ್ತದೆ. ಸ್ವಲ್ಪ ಗಟ್ಟಿಯಾಗಿ ಅಥವಾ ಅವಸರದಲ್ಲಿ ಉಚ್ಚರಿಸಿದರೆ ಥ್ಯಾಂಕ್ಸ್ ಹೇಳಿದವನಿಗೆ ಬೈದಹಾಗೆ ಅನಿಸುತ್ತದೆ. ಇಲ್ಲಿ ಒಂದು ಹಾಸ್ಯ ನೆನಪಿಗೆ ಬರುತ್ತದೆ. ಹಿಂದೊಬ್ಬ ಇಂಗ್ಲಿಷ್ ಬರದವನಿದ್ದ. ಅವನಿಗೆ ಅವ ಮಾಡಿದ ಯಾವುದೋ ಉಪಕಾರಕ್ಕೆ ಒಬ್ಬಾತ ಥ್ಯಾಂಕ್ಸ್. ಎಂದರಂತೆ ಅದಕ್ಕವ ತ್ಯಾಂಕ್ಯು ನಿನ್ನ ಅಮ್ಮ ಎಂಕ್ ದಾನೆ ಇಂಗ್ಲಿಷ್ ಬರ್‌ಪುಜಾ..ಅಂದನಂತೆ. ಈಗ ಆ ಮೆನ್‌ಶನ್ ನಾಟ್ ಕಡಿಮೆ ಆಗಿದೆ. ವೆಲ್‌ಕಂ ಬಳಕೆ ಹೆಚ್ಚಿದೆ. ಆಟೊಸ್ನೇಹಿತನೊಬ್ಬ ಹೇಳುತ್ತಿದ್ದ, ಒಮ್ಮೆ ಶ್ರೀಮಂತ ಅವನ ಆಟೋದಲ್ಲಿ ಕೂಲಿಂಗ್ ಗ್ಲಾಸೊಂದನ್ನು ಬಿಟ್ಟು ಹೋಗಿದ್ದನಂತೆ, ನಂತರ ಆಟೋವಾಲ ಅದನ್ನು ಶ್ರೀಮಂತನ ಮನೆಗೆ ಹೋಗಿ ಕೊಟ್ಟಾಗ ಆತ ಥಾಂಕ್ಸ್ ಹೇಳಿ ಕಳಿಸಿದನಂತೆ. ಮತ್ತೊಮ್ಮೆ ಒಬ್ಬ ಹಳ್ಳಿಯವ ಆಟೋದಲ್ಲಿ ಹಳೆ ಛತ್ರಿಯೊಂದನ್ನು ಬಿಟ್ಟು ನಡೆದಾಗ ಕರೆದು ಕೊಟ್ಟನಂತೆ. ಆ ಹಳ್ಳಿಯವ ನನಗೆ ಮರತೇ ಹೋಗಿತ್ತು ನೋಡು, ನಿನಾದುದರಿಂದ ನೆನಪಿಸಿದೆ ಎಂದು ಹೇಳಿ ಎಷ್ಟು ನಿರಾಕರಿಸಿದರೂ ಬಿಡದೆ ಪಕ್ಕದ ಹೋಟೆಲಿಗೆ ಕರೆದುಕೊಂಡು ಹೋಗಿ ಟೀ ಕೊಡಿಸಿದನಂತೆ. ಈಗ ಹೇಳಿ ಯಾರು ನಾಗರಿಕರು ಯಾರು ಅನಾಗರಿಕರು. "ದೊಡ್ಡವರ ಮಾತು ಚೆಂದ ಬಡವರ ಊಟ ಚೆಂದ" ಎಂಬ ಗಾದೆ ಮಾತೇ ಇದೆಯಲ್ಲಾ. ಇಲ್ಲಿ ನಾವು ಯಾವುದೇ ಫಲಾಪೇಕ್ಷೆ ಇಲ್ಲದೆ ಸಹಾಯ ಮಾಡಿದಾಗ ಕೇವಲ ಥ್ಯಾಂಕ್ಸ್‌ನಿಂದ ನಮಗೆ ಸಮಾಧಾನವಾಗುತ್ತದೆ. ಬಹಳ ಸಣ್ಣ ಸಣ್ಣ ಉಪಕಾರ ಆದಾಗಲೆಲ್ಲಾ ಈ ಶಬ್ಧವನ್ನು ಬಳಸಿ, ಥ್ಯಾಂಕ್ಸ್ ಅನ್ನು ಬಹಳ ಅಗ್ಗ ಮಾಡಿಬಿಟ್ಟಿದ್ದಾರೆ. ಆದುದರಿಂದ ಈಗ ನಮ್ಮಿಂದ ಉಪಕಾರ ಪಡೆದುಕೊಂಡವರು ಥ್ಯಾಂಕ್ಸ್ ಹೇಳಿದರೆ ನಮಗೆ ಬಹಳ ಅಗ್ಗವಾಗಿ ಮುಗಿಸಿಬಿಟ್ಟ ಅನ್ನಿಸುತ್ತದೆ. ○ **ಕುಂಭಗೌಡನ ಯು. ರಂಜಿತ್**, ಮುಕ್ಕಂದೂರು

ತಲಕಾಡು ಗಂಗರ ಆಡಳಿತ

ತಲತಲಾಂತರದಿಂದ ಹೇಳಿ ಕೊಂಡು ಬಂದಿರುವ ತಲಕಾಡು ಬೆಳ್ಳಾಳು:ವೆಳ್ಳಾಳು ಒಕ್ಕಲಿಗರು ಗಂಗರೆಂದೂ ಇವರು ಇಕ್ಷ್ವಾಕು ಸಂತತಿಗೆ ಸೇರಿದವರೆಂದೂ ಹೇಳಿಕೊಂಡು ಬಂದಿರುವುದು ಚರಿತ್ರೆಯಲ್ಲಿ ಪ್ರಚಲಿತ ವಾಗಿದೆ. ಈ ತಲಕಾಡು ಒಕ್ಕಲಿಗರು [ಗಂಗರು] ಇಕ್ಷ್ವಾಕುವಂಶ ಅಥವಾ ಗಂಗವಂಶ ಅಥವಾ ಸೂರ್ಯವಂಶಕ್ಕೆ ಸೇರಿದವರೆಂದು ಪ್ರಚಲಿತವಾಗಿದೆ.

ಲೇಖನ : ಟಿ. ಆರ್. ಮುದ್ದೇಗೌಡ

ಅಯೋಧ್ಯೆಯನ್ನು ಆಳಿದ ರಾಜ ಸಂತತಿಯು ಇಕ್ಷ್ವಾಕು ವಂಶಕ್ಕೆ ಸೇರಿದವರು ಮತ್ತು ವೈಷ್ಣವ ಸಂಪ್ರದಾಯಕ್ಕೆ ಸೇರಿದವರೆಂತಲೂ ಪ್ರಚಲಿತವಾಗಿದೆ. ಅಯೋಧ್ಯೆಯನ್ನು ಆಳಿದ ರಾಜಸಂತತಿಯು ಕಾಲಾಂತರದಲ್ಲಿ, ಅನೇಕ ಉಪಶಾಖೆಗಳಾಗಿ ಒಡೆದು ಸಣ್ಣಪುಟ್ಟ ರಾಜ್ಯಗಳನ್ನು [ಪ್ರಾಂತ್ಯಗಳನ್ನು] ಸ್ಥಾಪಿಸಿಕೊಂಡು ತಮ್ಮ ತಮ್ಮ ಆಡಳಿತ ನಡೆಸಿದರೆಂತಲೂ, ಅವರುಗಳು ತಮ್ಮ ತಮ್ಮ ವಂಶದ ಸಂತತಿಯನ್ನೇ ಉಳಿಸಿಕೊಂಡು (ಇಕ್ಷ್ವಾಕು ಸಂತತಿ) ರಾಜ್ಯಾಡಳಿತ ನಡೆಸಿರುತ್ತಾರೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ಅವರುಗಳ ಪೈಕಿಗೆ ಸೇರಿದ (ಅಯೋಧ್ಯೆಯ ರಾಜ ಸಂತತಿಗೆ ಸೇರಿದ) ಒಂದು ಶಾಖೆಯವರಾದ ದಡಿಗ ಮತ್ತು ಮಾದವರು ಸಹ ತಲಕಾಡಿನಲ್ಲಿ ರಾಜ್ಯ ಸ್ಥಾಪಿಸಿ ಆಡಳಿತ ನಡೆಸಿರುತ್ತಾರೆ. ತಮ್ಮ ಪೂರ್ವಜರುಗಳ ಹೆಸರನ್ನೇ ಮುಂದುವರಿಸಿಕೊಂಡು ಬಂದಿದ್ದಾರೆ. ಇವರದೇ ಆದ ಒಂದು ಶಾಖೆಯು ಉತ್ತರದಲ್ಲಿ ಕಳಿಂಗದಲ್ಲಿ ರಾಜ್ಯ ಸ್ಥಾಪನೆ ಮಾಡಿಕೊಂಡು ಆಡಳಿತ ನಡೆಸಿದರೆಂದು ಅಭಿಪ್ರಾಯ ಪಟ್ಟಿದ್ದಾರೆ. ಇವರನ್ನು ಉತ್ತರದ ಗಂಗರೆಂದು ತಲಕಾಡಿನ ಗಂಗರನ್ನು ದಕ್ಷಿಣದ ಗಂಗರೆಂದೂ ಅಭಿಪ್ರಾಯ ಪಟ್ಟಿದ್ದಾರೆ.

ದಡಿಗ, ಮಾದವರು ಅಯೋಧ್ಯೆಯಿಂದ ದಕ್ಷಿಣಾಭಿಮುಖವಾಗಿ ಹೊರಟು, ರಾಜ್ಯ ಸ್ಥಾಪನೆ ಮಾಡಲು ಉತ್ತಮವಾದ ಸ್ಥಳವನ್ನು ಹುಡುಕಿ ತಲಕಾಡೇ ಉತ್ತಮವಾದ ಸ್ಥಳ, ಕಾವೇರಿ ನದಿ ಹರಿಯುವ ಸ್ಥಳ ಪವಿತ್ರವಾದ ದಕ್ಷಿಣ ಗಂಗೆ ಎಂದೂ ತಿಳಿದು ಈ ಸ್ಥಳದಲ್ಲಿ ಸಮತಟ್ಟಾದ ಬಯಲು ಪ್ರದೇಶವಿದೆ ಫಲವತ್ತಾದ ಮಣ್ಣು ಇದೆ ಎಂಬುದನ್ನು ಅರಿತು, ತಲಕಾಡನ್ನು ತಮ್ಮ ಕೇಂದ್ರವನ್ನಾಗಿಮಾಡಿಕೊಂಡು ಈ ಊರಿಗೆ ಗಂಗವಾಡಿ 96,000 ವೆಂದು ಹೆಸರಿಟ್ಟುಕೊಂಡು ಆಡಳಿತ ಪ್ರಾರಂಭಿಸಿದರೆಂದು ಅಭಿಪ್ರಾಯ ಪಟ್ಟಿದ್ದಾರೆ. ಮತ್ತೇ ಇವರನ್ನು ಗಂಗರೆಂದೂ ಕರೆದಿದ್ದಾರೆ. ಕಾಲಾನಂತರ ತಲಕಾಡು ಗಂಗರು ಎಂದು ಇತಿಹಾಸಕಾರರು ಸ್ಪಷ್ಟಪಡಿಸಿದ್ದಾರೆ.

ನಂತರ ಇವರು (ಗಂಗರು:ಬೆಳ್ಳಾಳು: ವೆಳ್ಳಾಳು) ಸಂತತಿಯವರು, ಇಕ್ಷ್ವಾಕು ಸಂತತಿಗೆ ಸೇರಿದವರೆಂದು ಹೇಳಿಕೊಂಡು ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡು ತಮ್ಮ ಪೂರ್ವಜರ ಸಂತತಿಯ ಹೆಸರಿನಿಂದಲೇ ಆಡಳಿತವನ್ನು ಉತ್ತಮವಾಗಿ ನಡೆಸಿಕೊಂಡು ಬಂದಿರುತ್ತಾರೆ. ಇವರು ತಮ್ಮ ರಾಜ್ಯವನ್ನು ಕೊಯಮುತ್ತೂರು, ಸೇಲಂ, ತಂಜಾವೂರು, ಕೊಂಗುದೇಶ, ಕೊಂಕಣ ಪ್ರದೇಶಗಳನ್ನು ಗೆದ್ದುಕೊಂಡು ತಮ್ಮ ಆಡಳಿತವನ್ನು ಆ ಪ್ರದೇಶಗಳಲ್ಲಿ ನಡೆಸಿದರು. ಇದರಿಂದ ಇವರಿಗೆ ಹೊಸದಾಗಿ ಬಿರುದು ಬಾವಲಿಗಳು ದೊರೆತವು. ಅವುಗಳಾವುವೆಂದರೆ ಕೊಂಗಣಿವರ್ಮ, ಪೆರ್ಮಾನಾಡಿ, ಸತ್ಯವಾಕ್ಯಪೆರ್ಮಾನಾಡಿ, ಶ್ರೀವಲ್ಲಭ, ಪೃಥ್ವಿವಲ್ಲಭ, ಸಾರ್ವಭೌಮ ಮಹಾರಾಜಧಿರಾಜ ಇನ್ನು ಅನೇಕ ಬಿರುದುಗಳನ್ನು ಹೊಂದಿದ್ದರು. ಅವುಗಳ ಪೈಕಿ, ಕೊಂಗಣಿವರ್ಮ ಮತ್ತು ಪೆರ್ಮಾನಾಡಿ ಎಂಬ ಬಿರುದುಗಳನ್ನು ತಮ್ಮ ಹೆಸರಿನ ಮುಂದೆ ಬಳಸಿಕೊಂಡಿದ್ದಾರೆ. ಆದ್ದರಿಂದಲೇ ಇವರನ್ನು ದಡಿಗ, ಮಾದವರನ್ನು ಕೊಂಗಣಿವರ್ಮನೆಂತಲೂ ಇವರ ಸಂತತಿಗೆ ಗಂಗ ಸಂತತಿ ಅಥವಾ ಗಂಗವಂಶ ಅಥವಾ ಸೂರ್ಯವಂಶದವರೆಂತಲೂ, ವೈಷ್ಣವ ಸಂಪ್ರದಾಯಕ್ಕೆ ಸೇರಿದವರೆಂತಲೂ ಪ್ರಚಲಿತವಾಗಿದೆ. ಅಲ್ಲದೆ ಮೊದಲಿನಿಂದಲೂ ಶೈವ ಸಂಪ್ರದಾಯಕ್ಕೆ ಪ್ರೋತ್ಸಾಹ ಕೊಟ್ಟುಕೊಂಡು ಬರುತ್ತಿದ್ದಾರೆಂದು ತಿಳಿಸಿದ್ದಾರೆ. ಅಂದರೆ ವೈಷ್ಣವ ಮತ್ತು ಶೈವ ಪಂಥಗಳಿಗೂ ಸೇರಿದವರಾಗಿದ್ದರು ಎಂಬ ಅಭಿಪ್ರಾಯ ಹೊರಹೊಮ್ಮುತ್ತದೆ.

ಇವರು (ತಲಕಾಡಿನ ಗಂಗರು) ಉತ್ತಮ ಯೋಧರಾಗಿ, ಉತ್ತಮ ಆಡಳಿತಗಾರರಾಗಿದ್ದರು. ಅಲ್ಲದೆ ಶೈಕ್ಷಣಿಕವಾಗಿ ಉತ್ತಮ ಪಾಂಡಿತ್ಯವನ್ನು ಸಹ ಪಡೆದಿದ್ದರು ಎಂಬುದಾಗಿಯೂ ಮತ್ತು ಅಷ್ಟೇ ಪ್ರಾಮುಖ್ಯತೆಯನ್ನು ವ್ಯವಸಾಯ ರಂಗಕ್ಕೆ ಕೊಟ್ಟಿದ್ದರು. ವ್ಯವಸಾಯ ಕಾರ್ಯಕ್ರಮಕ್ಕೆ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದರು. ಉತ್ತಮವಾದ ಹಣದ ಬೆಳೆಗಳ ಕಡೆ ಗಮನ ಕೊಟ್ಟಿದ್ದರು. ಆದ್ದರಿಂದಲೇ ಅವರ ಕಾಲದಲ್ಲಿ ದೇಶ ಆರ್ಥಿಕವಾಗಿ ಸಂಪದ್ಭರಿತವಾಗಿತ್ತೆಂದೂ. ಸಮಾಜವು ಸುಭಿಕ್ಷವಾಗಿತ್ತೆಂದೂ ಹೇಳಿದ್ದಾರೆ. ಒಕ್ಕಲುತನಕ್ಕೆ ಬಹಳವಾಗಿ ಗಮನ ಹರಿಸಿದ್ದರು. ಅವರು ಒಂದು ಕಡೆ ದೇಶಕಟ್ಟಿ ಉತ್ತಮ ಆಡಳಿತ ಸ್ಥಾಪಿಸುವುದು ಮತ್ತೊಂದು ಕಡೆ [ಬಿಡುವಿನ ವೇಳೆ] ವ್ಯವಸಾಯ ಮಾಡುವುದು.

(ಮುಂದುವರೆಯುವುದು)

ಗೌಡರ ವಿವಾಹ ಪದ್ಧತಿ

[ಹಿಂದಿನ ಸಂಚಿಕೆಯಿಂದ]

ಹೆಣ್ಣೊಳಿಸಿ ಕೊಡುವುದು

ಧಾರಾ ಕಾರ್ಯಕ್ರಮ ಮುಗಿದು ಮದು ಮಕ್ಕಳು ವಧುವಿನ ಮನೆ ಪ್ರವೇಶಿಸಿ, ಹಾಲು ತುಪ್ಪ ಕುಡಿದು, ಹಿರಿಯರ ಆಶೀರ್ವಾದ ಪಡೆದ ನಂತರ ಹೆಣ್ಣೊಳಿಸಿ ಕೊಡುವುದು ಕ್ರಮ. ಈಗ ನೆಲ್ಲಕ್ಕಿಯಿಂದ

ಕೃಪೆ :
ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ

ಕೈಯ್ಯಾಲೆಗೆ ಬರುವ ಸಮಯದಲ್ಲಿ ವಧುವಿನ ಕಡೆಯವರು ಬಾಗಿಲು ತಡೆದು ಮದುಮಕ್ಕಳಲ್ಲಿ ಹೆಣ್ಣು ಹುಟ್ಟಿದರೆ ಸೋದರಕ್ಕೆ ಕೊಡುವುದಾಗಿಯೂ, ಗಂಡು ಹುಟ್ಟಿದರೆ ಸೋದರದಿಂದ ತೆಗೆದುಕೊಂಡು ಹೋಗುವುದಾಗಿಯೂ ಅವರಿಂದ ವಾಗ್ದಾನ ಮಾಡಿಸಿ ಹೆಣ್ಣೊಳಿಸಿ ಕೊಡುವುದು.

1. ಹೆಣ್ಣು ಗಂಡು ವಹಿಸಿ ಕೊಡುವುದು :

ಹೆಣ್ಣಿನ ಕಡೆಯವರೊಬ್ಬರು ಗಂಡು ಮತ್ತು ಹೆಣ್ಣಿನ ಮಧ್ಯದಲ್ಲಿ ನಿಂತು ಹೇಳುವ ಮಾತನ್ನು ಗಂಡಿನ ಕಡೆಯ ದಿಬ್ಬಣದ ಮುಖ್ಯಸ್ಥರೆನಿಸುವವರು ಇವರಿಗೆ ಎದುರಾಗಿ ನಿಂತು ತಮ್ಮ ವಶಕ್ಕೆ ತೆಗೆದು ಕೊಳ್ಳುವುದು. ಇಂದು ಗೌಡ ಜನಾಂಗದವರ ವಿವಾಹದಲ್ಲಿ ಹೆಣ್ಣಿನ ಮನೆಯವರಿಂದ ಗಂಡಿನ ದಿಬ್ಬಣದ ಮುಖ್ಯಸ್ಥರಿಗೆ ಗಂಡು ಮತ್ತು ಹೆಣ್ಣನ್ನು ವಹಿಸಿ ಕೊಡುವುದು ಎಂದು ಹೇಳುವರು.

ಹೆಣ್ಣು ವಹಿಸಿಕೊಡುವಾಗ ಹೇಳುವ ಮಾತುಗಳು :

ಹೆ.ವ. : ಹೆಣ್ಣು ವಹಿಸಿ ಕೊಡುವವರು.

ದಿ.ಮು. : ದಿಬ್ಬಣದ ಮುಖ್ಯಸ್ಥರು ಎಂದು ಓದಿಕೊಳ್ಳುವುದು.

ಹೆ.ವ. : ಪರಮ ವೈಭವದಿಂದ ತಮ್ಮ ಇಷ್ಟಮಿತ್ರರಿಂದೊಡಗೂಡಿ ಪುರುಷನ ಕಡೆಯಿಂದ ಆಗಮಿಸಲ್ಪಟ್ಟ ದಿಬ್ಬಣದ ಮುಖ್ಯಸ್ಥರಾದ ಮ ಹ ನಿ ೀ ಯ ರು ಯಾರಯ್ಯ ?

ದಿ.ಮು. : ನಾವಯ್ಯ.

ಹೆ.ವ. : ಹಾಗಾದರೆ ನಾವು ನಮ್ಮ ಪೂರ್ವ ಪದ್ಧತಿಯಂತೆ, ವಿಜ್ಞಾಪನೆಯನ್ನು ಸ್ವೀಕರಿಸಿ, ಚಂದ್ರರಾಜನೆಂಬ ಪುರುಷನಿಗೆ, ಪದ್ಮಾವತಿಯೆಂಬ ಕನ್ನಿಕೆಯನ್ನು, ವಧೂವರರನ್ನಾಗಿ ಮಾಡುವುದೆಂತ ಈ ಮೊದಲು ಮನದತ್ತ ಮಾಡಿ, ಆಮೇಲೆ ವಾಗ್ದಾತ್ತ ಮಾಡೋಣಾಯ್ತು ಅಲ್ಲವೋ ?

ದಿ. ಮು. : ಹೌದು.

ಹೆ.ವ. : ವಾಗ್ದಾತ್ತ ಮೇಲೆ ನಾವು ಉಭಯಸ್ಥರು ಕೂಡಿ ಆಕಾಶದಷ್ಟು ದೊಡ್ಡ ಚಪ್ಪರವನ್ನು ಹಾಕಿ, ಭೂಮಿಯಷ್ಟು ದೊಡ್ಡ ಹಸೆಯನ್ನು ಬರೆದುರತ್ನ, ಖಚಿತವಾದ ಮಂಟಪದಡಿಯಲ್ಲಿ, ಸಮಸ್ತ ಬಂಧು–ಬಾಂಧವರ ಸಮಕ್ಷಮದಲ್ಲಿ ನಮ್ಮ ಕನ್ಯಾರತ್ನವನ್ನು ಧಾರೆಯೆರೆದು ಕೊಟ್ಟಿದ್ದೇವೆಯಷ್ಟೆ !

ದಿ. ಮು. : ಹೌದು.

ಹೆ. ವ. : ಹಾಗಾದರೆ ನಿನ್ನೆಯ ದಿವಸ ಪುರುಷನನ್ನು ಮನ್ಮಥನಂತೆಯೂ, ಕನ್ನಿಕೆಯನ್ನು ರತಿದೇವಿಯಂತೆಯೂ ಶೃಂಗರಿಸಿದಲ್ಲಾಗಲಿ, ರೂಪು ಲಾವಣ್ಯದಲ್ಲಾಗಲಿ, ಏನೊಂದು ಕುಂದು ಕೊರತೆಯಿಲ್ಲದೆ, ಕಾಮಚಕ್ರೇಶ್ವರನನ್ನು ಹೋಲುವ ಪುರುಷನ ದ್ವಯ ಹಸ್ತಗಳಿಗೆ ಚಾರು ಹಸ್ತಗಳನ್ನಾಗಿ ಮಾಡಿದರಲ್ಲಾಗಲಿ, ಯಾವ ಲೋಪದೋಷಗಳು ಕಂಡುಬಂದಿಲ್ಲವಷ್ಟೆ ?

ದಿ. ಮು. : ಇಲ್ಲ.

ಹೆ. ವ. : ಹಾಗಾದರೆ ನಮ್ಮ ಮುದ್ದು ಬಾಲಕಿಯನ್ನು ನಿಮ್ಮ ಸ್ವಾಧೀನಕ್ಕೆ ಒಪ್ಪಿಸಿಕೊಡುತ್ತೇವೆ. ಹಾಗೆ ಒಪ್ಪಿಸಿ ಕೊಡುವಾಗ ಬಾಲಕಿಗೆ ಹನ್ನೆರಡು–ಹನ್ನೆರಡು ಇಪ್ಪತ್ತನಾಲ್ಕು ವರಹಗಳನ್ನೂ, ಉಡಲು ವಸ್ತ್ರವನ್ನೂ, ತೊಡಲು ಚಿನ್ನಾಭರಣಗಳನ್ನೂ, ಊಟ ಮಾಡಲು ಬೆಳ್ಳಿ ಬಟ್ಟಲನ್ನೂ, ಕೈ ತೊಳೆಯಲು ಬೆಳ್ಳಿ ಗಿಂಡಿಯನ್ನೂ, ಕರೆದುಣ್ಣಲು ಗೋವಿನ ಹಿಂಡನ್ನೂ, ಬಳುವಳಿಯಾಗಿ ಕೊಟ್ಟಿರುತ್ತೆವೆಯಷ್ಟೆ !

ಹೀಗೆ ನಾವು ಕೊಟ್ಟ ಅಲ್ಪ ಐಶ್ವರ್ಯವನ್ನು ಒಂದಕ್ಕೆ ಹತ್ತು, ಹತ್ತಕ್ಕೆ ನೂರು, ನೂರಕ್ಕೆ ಸಾವಿರ ಸಂಖ್ಯೆಯಲ್ಲಿ ಅಭಿವೃದ್ಧಿ ಮಾಡಿ ಕೀರ್ತಿಗಳಿಸುವಂತೆ ಮಾ ಡು ವ ಖ್ಯಾತಿವಂತ ಮಹಾಶಯರು ಯಾರಯ್ಯ?

ದಿ. ಮು. : ವರನಯ್ಯ.

ಹೆ. ವ. : ನಮ್ಮ ಬಾಲಕಿಗೆ ಕಡೆ ಹಲ್ಲು ಬರಲಿಲ್ಲ, ನೆತ್ತಿ ಎಣ್ಣೆ ಆರಲಿಲ್ಲ. ಅಂಗೈ ಬರೆ ಮಾಜಲಿಲ್ಲ. ಬುದ್ಧಿ ಜ್ಞಾನ ಬರಲಿಲ್ಲ. ಹೆತ್ತ ತಂದೆ ತಾಯಿಯರ ಮರೆಯಲಿಲ್ಲ, ಹಸಿ ಕಡಿಯಲರಿಯಳು, ಒಣಗಿಲು ಮುರಿಯಲರಿಯಳು, ಬೀಸಿ ಗುಡಿಸಲರಿಯಳು, ಅಂಗಳದಲ್ಲಿ ಆಡಿ, ಹಾಲನ್ನವ ಉಂಡು, ಮೆಟ್ಟಲಲ್ಲಿ ಓಡಿ, ತೊಟ್ಟಿಲಲ್ಲಿ ಮಲಗಬೇಕೆಂದು ಇಚ್ಛಿಸುವ ಮುದ್ದು ಬಾಲಕಿಗೆ ತ ಕ್ಕ ಬುದ್ಧಿವಾದವನ್ನು ಬೋಧಿಸುವಂತಹ ಬೋಧಕ ಯಾರಯ್ಯ?

ದಿ. ಮು. : ವರನ ಹಿರಿಯರಯ್ಯ

[ಮುಂದುವರಿಯುವುದು]

ಕೋಳಿ ಮೊಟ್ಟೆ

ಕೊಳ್ಳುವವ : ಮೊಟ್ಟೆ ಇದೆಯೇನ್ರಿ ?

ವ್ಯಾಪಾರಿ : ನಮ್ಮಂಗಡೀಲಿ ಇಲ್ಲ

ಕೊಳ್ಳುವವ : ಯಾಕ್ರಿ ಮೊಟ್ಟೆ ಇಟ್ಟಿಲ್ಲ ?

ವ್ಯಾಪಾರಿ : ಯಾಕೆ ಅಂದ್ರೆ ? ನಾನು ಕೋಳಿ ಅಲ್ಲ.

○ **ಹುಲಿಮನೆ ರಮೇಶ್,** ಮೈಸೂರು.

ಸ್ಮರಣೆ : ದಿ|| ಕರ್ಣೆಯ್ಯನ ಸೋಮಯ್ಯ ಚಿಣ್ಣಪ್ಪ

ದಿವಂಗತ ಕರ್ಣೆಯ್ಯನ ಸೋಮಯ್ಯ ಚಿಣ್ಣಪ್ಪನವರು 1910ರಲ್ಲಿ ಮಡಿಕೇರಿ ತಾಲ್ಲೂಕು, ಕುಂಬಳದಾಳು ಗ್ರಾಮದ ಸೋಮಯ್ಯ ಮತ್ತು ಪೂವಮ್ಮ ದಂಪತಿಗಳ ಹಿರಿಯ ಮಗನಾಗಿ ಜನಿಸಿದರು. ಆಗಿನ 2ನೇ ಕ್ಲಾಸು ಓದಿದ ಕಿಂಚಿತ್ ವಿದ್ಯೆಯಲ್ಲಿ 13 ವರ್ಷದ ಅರಣ್ಯ ಇಲಾಖೆಯಲ್ಲಿ ಗಾರ್ಡ್ ಆಗಿ ಸೇವೆ ಸಲ್ಲಿಸಿ, 15 ರೂಪಾಯಿಗಳ ಸಂಬಳದಲ್ಲಿ ಕುಶಾಲನಗರ ಸಮೀಪದ ಆನೆ ಕಾಡು ಪಾರೆಸ್ಟಿನಲ್ಲಿ ಸೇವೆ ಸಲ್ಲಿಸಿದ ಇವರು, ನಂತರ 1942ರಲ್ಲಿ ಸಂಬಳ ಕಮ್ಮಿಯಾಯಿತೆನ್ನುವ ಅಭಿಪ್ರಾಯದಲ್ಲಿ ಸೇವೆಗೆ ಅಸ್ತು.

ಸೇವೆಯ ನಂತರ ಕಂಟ್ರಾಕ್ಟರ್ ಆಗಿ ಕೆಲಸ ಮಾಡಿದರು. ಈ ಮಧ್ಯೆ ಅಂಗಡಿ ವ್ಯಾಪಾರ ಮಾಡಿಕೊಂಡೇ ಇದ್ದರು.[ಮುಖ್ಯ



ಸೋಮಯ್ಯ ಚಿಣ್ಣಪ್ಪ

ವಾಗಿ ಕಿತ್ತಳೆ [ಹುಳಿ], ಭತ್ತ, ಹುಲ್ಲು ಇತ್ಯಾದಿ.] 1934ರಲ್ಲಿ ಇವರು ಮಡಿಕೇರಿ ತಾಲ್ಲೂಕಿನ, ಕಾಟಕೇರಿ [ತಾಳತ್‌ಮನೆ] ಗ್ರಾಮದ ಶ್ರೀ ಪಟ್ಟಡ ಮೋಟಯ್ಯ ಮುಂದಣ್ಣನವರ ತೃತೀಯ ಪುತ್ರಿ ರುಕ್ಮಿಣಿಯನ್ನು ವಿವಾಹವಾದರು.

ದಾನಪರರು, ಸಮಾಜ ಸೇವಕರಾದ ಇವರು ಸೋಮವಾರಪೇಟೆ ತಾಲ್ಲೂಕು ಬೋರ್ಡಿನ ಸದಸ್ಯರಾಗಿ 1960ರಲ್ಲಿ ಮೊದಲಬಾರಿಗೆ ಅವಿರೋಧವಾಗಿ ಆಯ್ಕೆಯಾದರು. 1965 ರಲ್ಲಿ 2ನೇ ಬಾರಿಗೆ ಚುನಾಯಿತರಾಗಿ ಆಯ್ಕೆ. ಕುಶಾಲನಗರ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ನಿರ್ದೇಶಕರಾಗಿ ಕಡೇ ತನಕವು ಸೇವೆ. ಹಾಗೆಯೇ ತನ್ನೂರು ನಂಜರಾಯ ಪಟ್ಟಣ ಸೊಸೈಟಿಯಲ್ಲಿಯು ಸಹ ಅವಿರತ ಸ್ಮರಣೀಯ ಸೇವೆ ಅಂತಿಮ ಕ್ಷಣದ ತನಕವು ಇವರದಾಗಿತ್ತು. ಈ ಅವಧಿಯಲ್ಲಿ ಕುಶಾಲನಗರ ಪುರಸಭೆ ಸದಸ್ಯರಾಗಿದ್ದರು.

ಅಪಾರ ಸಮಾಜ ಸೇವೆ ಸಲ್ಲಿಸಿದ ಇವರು ಧಾನ ಧರ್ಮಗಳ ಖನಿಯಾಗಿದ್ದರು. ಊರಿನ ಪ್ರಮುಖ ವ್ಯಕ್ತಿಗಳ ಸಾಲಿನಲ್ಲಿ ಮುಖ್ಯರೆನಿಸಿದ್ದರು. ಅಧಿಕಾರಿ ವರ್ಗದವರಿಗೆ ಚಿಣ್ಣಪ್ಪ ಎಂದರೆ ಅಪಾರ ಪ್ರೀತಿ ವಿಶ್ವಾಸ. ಇವರಿಗೆಲ್ಲಾ ಸಾಮಾನ್ಯವಾಗಿ ಇವರ ಮನೆಯೆ ವಾಸ ಸ್ಥಾನವಾಗಿತ್ತು. ನಂಜರಾಯ ಪಟ್ಟಣದಲ್ಲಿ ಹೈಸ್ಕೂಲು ಕಟ್ಟುವಾಗ ಒಂದು ಕೊಠಡಿಗೆ ರೂ. 10,000/– ಅನ್ನು ವಿದ್ಯೆಗೆ ಸಲ್ಲಿಸಿದ ಇವರ ಸೇವೆ ಅಪಾರ. ಮಡಿಕೇರಿ ಸಮಾಜ,ವಿದ್ಯಾಸಂಘ, ಮೈಸೂರು ಶಾಖೆ ಇನ್ನೂ ಹತ್ತು ಹಲವು ಸಂಸ್ಥೆಗಳಿಗೆಲ್ಲಾ ತಲಾ 1001/– ರೂ.ನಂತೆಯು ಕೊಟ್ಟು ಜನಾಂಗದ ಅಭಿವೃದ್ಧಿಗೆ ಸಹಕರಿಸಿದ್ದಾರೆ.

ಈ ಎಲ್ಲಾ ಕೆಲಸ ಕಾರ್ಯಗಳಿಗೆ ಇವರ ಪತ್ನಿ ರುಕ್ಮಿಣಿಯವರ ಸಹಕಾರ ಇದ್ದೇ ಇತ್ತು. ಅಂದಿನ 7ನೇ ತರಗತಿ ತನಕ ಓದಿದ ಇವರು ಓದಿನಲ್ಲಿ ತುಂಬಾ ಆಸಕ್ತಿಯುಳ್ಳವರು. ಇಂದು ಸಹ ತನ್ನ 80ನೇ [1918] ವಯಸ್ಸಿನಲ್ಲಿಯು ವೃತ್ತ ಪತ್ರಿಕೆಯನ್ನು ಓದುವ ಹವ್ಯಾಸವಿದೆ. ಎಡೆಬಿಡದೆ ನಿರಂತರವಾಗಿ ಓದುವ ಅಭ್ಯಾಸ ಇವರಿಗಿರುವುದನ್ನು ಸಂಗಾತಿ ಕಣ್ಣಾರೆ ಹಲವಾರು ಬಾರಿ ಕಂಡಿದೆ. ನಿಜಕ್ಕೂ ಕಿರಿಯರಿಗೂ ಹಾಗೂ ಗೌಡ ಮಹಿಳೆಯರಿಗೆ ಮಾದರಿಯಾಗಬಹುದಾದ ವ್ಯಕ್ತಿತ್ವ ಇವರದಾಗಿದೆ.

ಶ್ರೀಯುತರಿಗೆ 2 ಗಂಡು 5 ಹೆಣ್ಣು ಮಕ್ಕಳು. ಹಿರಿಯ ಮಗ ಕೃಷ್ಣಪ್ಪ ಕೃಷಿಕರಾಗಿ ನಂಜರಾಯಪಟ್ಟಣದ ಮಿಡ್ಲ್ ಸ್ಕೂಲ್‌ನಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 2ನೆಯ ಮಗ ಕಾರ್ಯಪ್ಪ ಹೈಸ್ಕೂಲಿನಲ್ಲಿ ನಿರ್ದೇಶಕರಾಗಿಯೂ, ನಂಜರಾಯಪಟ್ಟಣದ ವಿ.ಎಸ್.ಎಸ್.ಎನ್. ಸೊಸೈಟಿಯಲ್ಲಿ ಅಧ್ಯಕ್ಷರಾಗಿಯೂ ತಂದೆಯಂತೆಯೇ ಮಕ್ಕಳು ಸಹ ಸಮಾಜ ಸೇವೆಯಲ್ಲಿ ತೊಡಗಿದ್ದಾರೆ.

ದಿನಾಂಕ 23–9–83ರಲ್ಲಿ ಪಾರ್ಶ್ವವಾಯು ಪೀಡಿತರಾಗಿ 9 ತಿಂಗಳುಗಳ ನಂತರ ವಿಧಿವಶರಾದ ಇವರ ಸ್ಮರಣೆಯನ್ನು ಯುವ ಪೀಳಿಗೆಗೆ ಪ್ರಾಥಮಿಕ ಮಟ್ಟದಲ್ಲಿ ತಿಳಿಸುವುದು ಅಲ್ಲದೇ ಅಪಾರ ಸೇವೆ ಸಲ್ಲಿಸಿದ ಇಂತವರ ಕಾರ್ಯದ ಶ್ಲಾಘನೆಯನ್ನು "ಕೊಡಗು ಸಂಗಾತಿ" ಕೈಗೆತ್ತಿಕೊಂಡಿದೆ ಅಲ್ಲದೆ ಇವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಹಾರೈಸುತ್ತದೆ.

○ಲೇಖನ : **ಪಟ್ಟಡ ಪ್ರಭಾಕರ್**

ಏಯ್ಡ್ಸ್ ಎಂಬ ಮಾರಕ ರೋಗ

ಭಾರತ ಸುಂದರವಾದ ದೇಶ. ಈ ನಮ್ಮ ದೇಶದೊಳಗೆ 'ಏಯ್ಡ್ಸ್' ಎಂಬ ಭಯಾನಕ ಮಾರಕ ರೋಗವೊಂದು ನುಸುಳಿ ಬಿಟ್ಟಿದೆ. ಅಮೇರಿಕಾದಂತಹ ಶ್ರೀಮಂತ ರಾಷ್ಟ್ರ ಹಾಗೂ ಭಾರತದಂತಹ ಬಡ ರಾಷ್ಟ್ರಗಳಿಗೂ ಕಾಲಿಟ್ಟಿರುವ ಈ ರೋಗ ಜನರನ್ನು ಕಂಗಾಲನ್ನಾಗಿಸಿದೆ. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಹರಡ ತೊಡಗಿರುವ ಭೀಕರ ರೋಗ ಏಯ್ಡ್ಸನ್ನು ತಡೆಯಲು ಗೋಡೆಯನ್ನು ನಿರ್ಮಿಸುವ ಮೊದಲೇ ಮುನ್ನುಗ್ಗಿದೆ.

ಪ್ರಪಂಚದಲ್ಲಿ ಮೊದಲು ಏಯ್ಡ್ಸ ಕಂಡು ಬಂದದ್ದು ಆಫ್ರಿಕಾದಲ್ಲಿ. ಈಗ ಆಫ್ರಿಕಾದಲ್ಲಿ 6.5 ಮಿಲಿಯನ್ ಜನರಿಗೆ ಏಯ್ಡ್ಸ ರೋಗ ತಗುಲಿದೆ. ಎಂದರೆ ನಂಬಲು ಅಸಾಧ್ಯವಾದ ವಿಷಯ ನಂತರ ಅಮೇರಿಕಾದಲ್ಲಿ ಈ ರೋಗ ಕಂಡು ಬಂದಿತು.

'AIDS' ಎಂದು ಚುಟುಕವಾಗಿ ಕರೆದರು. ಅದರ ಪೂರ್ಣ ಹೆಸರು. **"Aequ-ired Immune Difficency Syndrome"**. ಈ ರೋಗ ಇಷ್ಟು ಬೇಗ ಹರಡಲು ಕಾರಣವೇನೆಂದು ಕೇಳಿದರೆ, ಲೈಂಗಿಕ ಸಂಬಂಧವೇ ಈ ರೋಗದ ಮೂಲ ಕಾರಣ. ಕ್ಷಣಾರ್ಧದ ಲೈಂಗಿಕ ಸುಖ ಅರಸಿ ಹೋಗುವವರಿಗೆ, ಈ ರೋಗ ಪರಲೋಕಕ್ಕೆ ತಲುಪಿಸುತ್ತದೆ. ಬರಿ ಲೈಂಗಿಕ ಸುಖಕ್ಕೆ ಆಸೆ ಪಡುವವರಲ್ಲದೆ, ಮಾದಕ ಔಷಧಿಗಳಿಗೆ ದಾಸರಾಗಿರುವವರು ಇದರ ಗ್ರಾಹಕರು.

ಏಯ್ಡ್ಸ ಕಾಯಿಲೆಯು H.I.V. [Human Immune difficency Virus] ಎಂಬ ವೈರಸ್‌ಗಳಿಂದ ರೋಗ ಉತ್ಪತ್ತಿಯಾಗುತ್ತದೆ. ದೇಹದಲ್ಲಿ ರಕ್ತದೊಳಗಿನ ಬಿಳಿ ರಕ್ತ ಕಣಗಳನ್ನು ಈ Virus ನಿಷ್ಕ್ರಿಯ ಮಾಡುತ್ತದೆ. ಆದುದರಿಂದ ವ್ಯಕ್ತಿ ರೋಗ ನಿರೋಧಕ ಶಕ್ತಿ ಸಂಪೂರ್ಣ ಕಳೆದುಕೊಳ್ಳುತ್ತಾನೆ. ಜ್ವರ, ಕೆಮ್ಮು ಮುಂತಾಗಿ ಯಾವ ಸಣ್ಣ ಕಾಯಿಲೆಯಾದರೂ, ದೇಹದ ಯಾವುದೇ ಭಾಗಕ್ಕೆ ಚಿಕ್ಕ ಗಾಯವಾದರು ರೋಗ ನಿರೋಧಕ ಶಕ್ತಿ ನಶಿಸಿ ಹೋಗಿರುವುದರಿಂದ ಆ ವ್ಯಕ್ತಿ ಆರೋಗ್ಯವಂತನಾಗುವುದು ಕಷ್ಟದ ಮಾತೇ ಸರಿ.

ಈ ರೋಗ ಹರಡುವ ದಾರಿಯಾದರು ಯಾವುದು ? ಒಂದು ಚಿಕ್ಕ ಉದಾಹರಣೆ : ಒಂದು ಲಾರಿ ಚಾಲಕ ತನ್ನ ದಿನದ ರಾತ್ರಿಯನ್ನು ಒಮ್ಮೆ ಮಂಗಳೂರಿನಲ್ಲಿ ಕಳೆದು ಮತ್ತೊಂದು ದಿನ ಬೆಂಗಳೂರಿನಲ್ಲಿ ಕಳೆಯುತ್ತಾನೆ. ಈ ಎರಡು ರಾತ್ರಿಯೂ ಸ್ತ್ರೀ ಸಂಗ ಮಾಡಿರುತ್ತಾನೆ. ಮುಂದಿನ ದಿನ ತನ್ನ ಕ್ಷಣಿಕ ಸುಖವನ್ನು ಇನ್ನಾವುದೋ ಊರಿನಲ್ಲಿ ಕಳೆಯುತ್ತಾನೆ. ಹೀಗೆ ಹೆಚ್ಚಿನ ಸ್ತ್ರೀ ಸಂಗ ಮಾಡಿ ಎಲ್ಲರಿಗೂ ಏಯ್ಡ್ಸ ಎಂಬ ಮಾರಕ ರೋಗವನ್ನು ಕೊಟ್ಟು ಹೋಗಿರುತ್ತಾನೆ. ಇನ್ನು ಕೆಲವು ಚುಚ್ಚು ಮದ್ದಿನಲ್ಲಿ ಬಳಸುವ ಸೂಜಿಗಳಲ್ಲೂ ಕೂಡ ಬರುತ್ತದೆ. ಹೇಗೆಂದರೆ ಏಯ್ಡ್ಸ ರೋಗ ತಗುಲಿದ ರೋಗಿಗೆ ಚುಚ್ಚಿದ ಸೂಜಿಯಲ್ಲಿ ಮತ್ತೊಬ್ಬನಿಗೆ ಚುಚ್ಚಿದರೆ ರೋಗ ಅಂಟುತ್ತದೆ. ಮಾದಕ ವಸ್ತುಗಳನ್ನು ಒಬ್ಬ ವ್ಯಕ್ತಿ ಸೇವಿಸಿದನ್ನು ಇನ್ನೊಬ್ಬ ವ್ಯಕ್ತಿ ಸೇವಿಸಿದರೆ ಈ ರೋಗ ಹರಡಲು ಸಾಧ್ಯವಿದೆ. ಕೆಲವೊಮ್ಮೆ ತುರ್ತು ಸಂದರ್ಭಗಳಲ್ಲಿ ರಕ್ತವನ್ನು ಪರಿಪೂರ್ಣವಾಗಿ ಪರಿಶೋಧನೆಗೆ ಒಳಪಡಿಸದೆ ಒಬ್ಬ ವ್ಯಕ್ತಿಗೆ ಒದಗಿಸಿದಲ್ಲಿ ಈ ರೋಗ ಹರಡಲು ಸಾಧ್ಯವಿದೆ. ಒಟ್ಟಿನಲ್ಲಿ ಈ ಕಾರಣಗಳಿಂದ ಏಯ್ಡ್ಸ ಹರಡುವ ಸಾಧ್ಯತೆ ಹೆಚ್ಚು.

ಈ ರೋಗಕ್ಕೆ 25 ರಿಂದ 49 ವರ್ಷದೊಳಗಿರುವ ಮಾನವರು ಜಗತ್ತಿನಾದ್ಯಂತ ಬಲಿಯಾಗಿದ್ದಾರೆ. ಮರಣದಲ್ಲಿ ಕೊನೆಗೊಳ್ಳುವ ಈ ರೋಗಕ್ಕೆ ಪರಿಹಾರ ಕಂಡು ಹಿಡಿದಿದ್ದರೂ, ಅದು ಅಷ್ಟಾಗಿ ಪ್ರಯೋಜನಕ್ಕೆ ಬರುತ್ತಿಲ್ಲ.

ಈ ರೋಗ ಹರಡದಾಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬಹುದು. ಅವುಗಳೆಂದರೆ 1. ಒಬ್ಬರಿಗಿಂತ ಹೆಚ್ಚು ಜನರೊಂದಿಗೆ ಲೈಂಗಿಕಸಂಪರ್ಕ ಇಟ್ಟುಕೊಳ್ಳಬಾರದು.

2. ಚುಚ್ಚು ಮದ್ದು ತೆಗೆದುಕೊಳ್ಳುವಾಗ ಸೂಜಿಯನ್ನು ನಾವೇ [ಸಿರೆಂಜ್] ಕೊಡುವುದು.

3. ಹೆಚ್ಚು ಸೂಕ್ತ ಅಲ್ಲದೆ ಮಾದಕ ವಸ್ತುಗಳನ್ನು ತೆಗೆದುಕೊಳ್ಳಬಾರದು.

4. ಮಿತಿ ಮೀರಿದ ಲೈಂಗಿಕ ಕ್ರಿಯೆಯಲ್ಲಿ ತೊಡಗಬಾರದು.

5. ರಕ್ತವನ್ನು ನೀಡುವಾಗ ಅಥವಾ ತೆಗೆದುಕೊಳ್ಳುವಾಗ ಪರಿಶೀಲಿಸುವುದು ಸೂಕ್ತ.

6. ಈ ರೋಗ ತಗುಲಿದ ಗಂಡಸು ಅಥವಾ ಹೆಂಗಸು ಮದುವೆಯಾದಲ್ಲಿ ಅವರ ಮಕ್ಕಳಲ್ಲಿ ಈ ರೋಗ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ.

ಸೆಕ್ಸ್ ಶಿಕ್ಷಣದಿಂದ ಈ ಸಮಸ್ಯೆ ತೀರಿ ಹೋಗುತ್ತದೆ ಎಂದು ಭಾವಿಸುವ ಕಾಲ ಈಗ ದೂರವಾಗಿ ಬಿಟ್ಟಿದೆ. 2,000 ಇಸವಿ ಕಳೆಯುವುದರೊಳಗೆ ವಿಶ್ವದಾದ್ಯಂತ 10 ಕೋಟಿ ಜನರಿಗೆ ಈ ರೋಗ ಹರಡಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜು ಮಾಡಿದೆ.

ಸಾವಿನ ಉರುಳನ್ನು ಹಿಡಿದುಕೊಂಡು ನಮ್ಮ ಸುತ್ತ ಮುತ್ತಲೂ ಏಯ್ಡ್ಸ ವ್ಯಾಪಕವಾಗಿ ಕಾದು ನಿಂತಿದೆ. ಆ ಉರುಳಿನೊಳಗೆ ನೇರವಾಗಿ ಎಚ್ಚರ ವಹಿಸುವುದು ಸಾರ್ವತ್ರಿಕ ಆರೋಗ್ಯಕ್ಕೆ ನಾವು ಕೊಡಬೇಕಾದ ಕೊಡುಗೆಯಾಗಿದೆ.

ಏಯ್ಡ್ಸ ಒಂದು ಮಾರಕ ರೋಗ, ಇದನ್ನು ಬದಿಗೊತ್ತುವುದೇ ನಮ್ಮ ಜೀವನಕ್ಕೆ ಮಾರ್ಗ. ○**ಲೋಕೇಶ್**, ಮಡೆ

ಕಾವೇರಿ

ಕೊಡಗಿನ ಬ್ರಹ್ಮಗಿರಿ ತಪ್ಪಲಲಿ ಹುಟ್ಟಿ
ಕವೇರನ ವರಪುತ್ರಿಯಾಗಿ
ಅಗಸ್ತ್ಯ ಮಹರ್ಷಿಯ ವಿವಾಹವಾಗಿ
ಬ್ರಹ್ಮ ಆಜ್ಞೆಯಂತೆ ನೀರಾಗಿ
ಹರಿದಳು ಭಾಗಮಂಡಲದ ಮಾರ್ಗವಾಗಿ
ಝುಳ ಝುಳನೆ ನೃತ್ಯಮಾಡಿ ಹೊರಟಳು
ಕನ್ನಂಬಾಡಿಯಲ್ಲಿ ನೆಲೆಸಿದಳು
ಮೈಸೂರು ನಗರವ ಬೆಳೆಸಿದಳು
ಹೊರಟಳು ಶ್ರೀರಂಗನ ಗುಡಿಗೆ
ಶ್ರೀರಂಗನ ಗುಡಿಸುತ್ತಿ ಜನರ ಮನ ತಣಿಸಿ
ನಿಂತಳು ಕಾವೇರಿ ಪಟ್ಟಣದ ಹೆಣ್ಣಾಗಿ
ಲೋಕಮಾತೆಯಾಗಿ ಹರಿದು ಬಂದಳು
ಭಾರತದ ಸ್ವರ್ಣ ಪದವಿಗೇರಿದಳು
ಕನ್ನಡಿಗರ ಮನದಲಿ ಚಿರಾಯುವಾದಳು
ಕೊಡಗಿನ ಬೆಡಗಿ ಕಾವೇರಿ.

○ **ಮಳ್ಳನ ಎಸ್. ವಸಂತ್ (ವಿನು),** ಮಕ್ಕಂದೂರು

ವನಮಾತೆ

ಸುಂದರ ಬೆಳದಿಂಗಳ ವನದಲ್ಲಿ
ನಾ ಬರೆದೆನು ಸುಂದರ ಕಾವ್ಯ
ಗಗನದಲ್ಲಿ ಮೂಡಿತು ಸುಂದರ ಚುಕ್ಕಿ
ಮರಗಳೆಡೆಯಿಂದ ಬೀಸಿತು ತಂಪಾದ ಗಾಳಿ
ನಾ ಹೇಗೆ ವರ್ಣಿಸಲಿ ನಿಸರ್ಗದ ಹಿರಿಮೆಯನು !

ದಿಟ್ಟವಾಗಿ ಬೆಳೆದು ನಿಂತಿರುವ ಮರಗಿಡಗಳ ರಾಶಿ
ಪ್ರಾಣಿಪಕ್ಷಿಗಳು ನಿದ್ರೆ ಮಾಡುತ್ತಿರುವ ಶಬ್ಧ
ಬೆಳದಿಂಗಳಿಗೆ ಗೆಜ್ಜೆ ತೊಡಿಸಿದಂತೆ ಮಾಡುತ್ತಾ
ಮೈತುಂಬಿ ಹರಿಯುತ್ತಿರುವ ಕಾವೇರಿಯ ಶಬ್ಧ
ತನಗಾಗಿ ಏನೂ ಚಿಂತಿಸದೆ ಪರರ
ಉದ್ಧಾರಕ್ಕಾಗಿ ಮುಡಿಪಿಟ್ಟ ಈ ಜೀವ

ಆದರೆ ಇಂದು ಎಲ್ಲಿ ನೋಡಿದರು ವನಮಾತೆಯ
ಕಣ್ಣೀರಿನ ಜೋಡಿ, ಜೋಡಿ ಕೋಡು
ತನ್ನ ಸ್ವಾರ್ಥಕ್ಕಾಗಿ ಮಾನವ ಕೊಟ್ಟಿರುವ
ಭಯಂಕರ ಘೋರ ಶಿಕ್ಷೆ
ಇದರಿಂದ ಆಗಲಿದೆ ಸಕಲ ಜಂತುಗಳ ಅಂತ್ಯ
ಮುಂದಾದರು ಅರಿತುವರಿಸೋಣ ವನಮಾತೆಯ
ಕಣ್ಣೀರು
ಎಂದೆಂದು ಶಾಶ್ವತವಾಗಿ ಇರಲಿ ಬೆಳದಿಂಗಳ ವನದಲ್ಲಿ
ಇವೆಲ್ಲರನು ಹರಿಸಿ ತಲುಪಿಸಲಿ ಮನೆ ಮನೆಗೂ
ಈ ನಮ್ಮ ಪಾಕ್ಷಿಕ "ಕೊಡಗು ಸಂಗಾತಿ"

○ **ಜಿ. ಕೆ. ಸತೀಶ್‌ಕುಮಾರ್,** ಕುಣಿಗಲ್

ನತದೃಷ್ಟ

ಸಡಗರದ ಹಬ್ಬ ಹುತ್ತರಿ ಹಬ್ಬ
ಎಲ್ಲರೂ ಕುಣಿದು ನಲಿಯುವ ಹಬ್ಬ
ನನಗಿಲ್ಲದಾಯಿತೇ ಈ ಸಂಭ್ರಮದ ಹಬ್ಬ

ಏನೆಂದು ಹೇಳಲಿ ನಾ
ಪರೀಕ್ಷೆ ಬೆನ್ನತ್ತಿತೆನ್ನಾ
ಆಹಾ ಓಹೋ ಎಂದು ಕುಣಿಯಬೇಕೆಂದಿದ್ದೆ
ಈಗ ಅಯ್ಯೋ ದೇವರೇ ಎಂದು ಸಂಕಟಗೊಂಡೆ
ಏನು ಹೇಳಲಿ ನಾ ನನಗಿಲ್ಲದಾಯಿತೇ
ಈ ಸಂಭ್ರಮದ ಹುತ್ತರಿ ಹಬ್ಬ

ಹೊಸ ಬಟ್ಟೆ ಉಟ್ಟು "ಪಲೀ ಪಲೀ ಬಾ"
ಎಂದು ಕುಣಿಯ ಬೇಕೆಂದಿದ್ದೆ
ಆದರೇನು ಮಾಡಲಿ ಸಮ ವಸ್ತ್ರ ಧರಿಸಿ
ಪರೀಕ್ಷೆಯನ್ನು ಎದುರಿಸಬೇಕಾಗಿದೆ
ನನಗಿಲ್ಲದಾಯಿತೆ ಸಂತೋಷದ
ಈ ಹುತ್ತರಿ ಹಬ್ಬ

ನನಗಿಲ್ಲವಾದರೇನು
ಇದು ನನ್ನ ನತದೃಷ್ಟ
ಆದರೆ ನಮ್ಮ ಗೌಡ ಜನಾಂಗಕ್ಕೆ
ತೆರೆಯಲಿ ಹುತ್ತರಿ ಅದೃಷ್ಟದ ಬಾಗಿಲು.

○ **ಉಳುವಾರನ ಥನುಜ ಜನಾರ್ಧನ್,** ಹುಣಸೂರು

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 1837 ರ ಸ್ವಾತಂತ್ರ್ಯಸಂಗ್ರಾಮ

[ಹಿಂದಿನ ಸಂಚಿಕೆಯಿಂದ]

ಕೈದಿಗಳನ್ನು ತಮ್ಮ ಸೈನ್ಯಕ್ಕೆ ಸೇರಿಸಿಕೊಂಡ ನಂತರ ಕಲ್ಯಾಣಸ್ವಾಮಿಯು ದರ್ಬಾರನ್ನು ನಡೆಸಿದರು. ಈ ಸಮಯದಲ್ಲಿ ಮಂಗಳೂರಿನ ವರ್ತಕರು ಮತ್ತು ಮುಖ್ಯಸ್ಥರು ಕಲ್ಯಾಣ ಸ್ವಾಮಿಯ ಸೈನ್ಯಕ್ಕೆ ಬೇಕಾದ ಊಟ ಉಪಚಾರದ ಏರ್ಪಾಡನ್ನು ಮಾಡಿದರು. ಬ್ರಿಟಿಷರನ್ನು ಮಂಗಳೂರಿನಿಂದ ಹೊಡೆದೋಡಿಸಿದ ಕಲ್ಯಾಣಸ್ವಾಮಿ ಹಾಗೂ ಅವರ ಸೈನ್ಯವನ್ನು ಮೆಚ್ಚಿ ಕೊಂಡಾಡಿದರು. ಈ ರೀತಿ ಹದಿಮೂರು ದಿನಗಳನ್ನು ಅವರು ಕಳೆದರು.

ಲೇಖಕ : **ಪೂಜಾರಿ ಮೊಣ್ಣಪ್ಪ**

ಕಲ್ಯಾಣ ಸ್ವಾಮಿಯ ಸೈನ್ಯವು ಮಂಗಳೂರನ್ನು ವಶಪಡಿಸಿಕೊಂಡ ವರ್ತಮಾನವು ತಾವುನಾಡು, ಬೇಂಗುನಾಡು ಜನರಿಗೆ ತಿಳಿಯಿತು. ಅಲ್ಲದೆ ಸುಬೇದಾರ್ ಮಾದಯ್ಯನವರು ಬಂದು ಈ ನಾಡಿನ ಜನರು ಸುಳ್ಯಕ್ಕೆ ಕಲ್ಯಾಣ ಸ್ವಾಮಿಯ ಸೈನ್ಯವನ್ನು ಸೇರುವ ಜನರನ್ನು ತಡೆದಾಗ ಅಲ್ಲಿಗೆ ಗುಡ್ಡೇರ ಅಪ್ಪಯ್ಯನವರು ಬಂದು ಈ ಪ್ರಯತ್ನವನ್ನು ಮುರಿದು ಮಾದಯ್ಯ ಸುಬೇದಾರರನ್ನು ಸೆರೆಯಲ್ಲಿಟ್ಟರು.

ನಾಲ್ಕು ನಾಡಿನಲ್ಲಿ ಬೋಪು ದಿವಾನರ ನೆಂಟರುಗಳು ಕಲ್ಯಾಣಸ್ವಾಮಿಯ ಸೈನ್ಯಕ್ಕೆ ಸೇರಿದರು, ಇದರಲ್ಲಿ ನಾಲ್ಕು ನಾಡಿನ ಉತ್ತು ಎಂಬುವರು ಪ್ರಮುಖರು.

ಕಲ್ಯಾಣ ಸ್ವಾಮಿಯು ಮಂಗಳೂರಿನಲ್ಲಿ ಜಯಗಳಿಸಿದ ವಿಷಯ ಕೊಡಗಿನ ಸೂಪರಿಂಟೆಂಡೆಂಟ್ ಕ್ಯಾಪ್ಟನ್ ಲೀಹಾರ್ಡಿಗೆ 1837 ನೇ ಏಪ್ರಿಲ್ 1ರಲ್ಲಿ ಗೊತ್ತಾಯಿತು. ಕಲ್ಯಾಣ ಸ್ವಾಮಿಯ ಕಡೆಯವರು ಮಾರ್ಚ್ 5ನೇ ತಾರೀಖು ಶಿವರಾತ್ರಿಯ ದಿನ ಮಡಿಕೇರಿ ಕೋಟೆಯನ್ನು ಮುತ್ತಿ, ಕೊಡಗನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಯೋಜನೆ ಹಾಕಿದ್ದರು.

ಕೊಡಗಿನ ಪದಚ್ಯುತ ಚಿಕ್ಕವೀರ ರಾಜೇಂದ್ರರು ಕೊಡಗಿನಿಂದ ಹೋದ ನಂತರ ಹಿಂದೆ ಇದ್ದ ದಿವಾನರ ಪೈಕಿ ಎಲ್ಲಾ ಮೂರು ದಿವಾನರುಗಳಾದ ಅಪ್ಪಾರಂಡ ಬೋಪು ದಿವಾನರು, ಚಪ್ಪುಡೀರ ಪೊನ್ನಪ್ಪ ದಿವಾನರು, ಲಕ್ಷ್ಮಿನಾರಾಯಣ ದಿವಾನರು ಕೊಡಗಿನ ದಿವಾನರಾಗಿ ಬ್ರಿಟೀಷರ ಕೈ ಕೆಳಗೆ ಮುಂದುವರಿದರು. ಇದರಲ್ಲಿ ಲಕ್ಷ್ಮಿನಾರಾಯಣ ದಿವಾನರು ತನ್ನ ತಮ್ಮ ಸುಳ್ಯದ ಸುಬೇದಾರರಾದ ರಾಮಪ್ಪಯ್ಯನವರ ಮುಖಾಂತರ ಬಂದ ಸುಳ್ಯದಲ್ಲಿರುವ ಜನರು ದಂಗೆ ಏಳುವರೆಂಬ ಸುದ್ದಿಯನ್ನು ತಿಳಿಸಿದ್ದನ್ನು ಕ್ಯಾಪ್ಟನ್ ಲೀಹಾರ್ಡಿಗೆ ತಿಳಿಸಿದಾಗ ಅದು ಸುಳ್ಳೆಂದು ಲಕ್ಷ್ಮಿನಾರಾಯಣ ದಿವಾನರು ದಂಗೆಗಾರರೊಡನೆ ಪಿತೂರಿ ನಡೆಸುವರೆಂಬ ಸಂಶಯದಿಂದ ಅವರ ವಿರೋಧಿಗಳು ಲೀಹಾರ್ಡಿಗೆ ಆ ರೀತಿ ಹೇಳಿದುದರಿಂದ ಅವರನ್ನು ದಿವಾನ ಗಿರಿಯಿಂದ ತೆಗೆದುಹಾಕಿದರು. ಆದರೆ ಈಗ ಕಲ್ಯಾಣ ಸ್ವಾಮಿ ಕಳುಹಿಸಿದ ನಿರೂಪದ ಪ್ರತಿ ಸಿಕ್ಕಿ ಲಕ್ಷ್ಮಿನಾರಾಯಣ ದಿವಾನರು ಹೇಳಿದ್ದು ದೃಢವಾಯಿತು. ಲೀಹಾರ್ಡಿ ಘಟ್ಟದ ಕೆಳಗಿನ ಗಲಭೆಯು ಕೊಡಗಿಗೆ ಹರಡಬಾರದೆಂದು ಅದನ್ನು ಪ್ರಾರಂಭದಲ್ಲಿಯೆ ಹತ್ತಿಕ್ಕಬೇಕೆಂದು ನಿಶ್ಚಯಿಸಿ ಕೆಳಗಿನ ತಳನೀರು ಕಣಿವೆಯಲ್ಲಿ ಸೇರಿದ್ದ ಸೇನೆಯನ್ನು ಸದೆಬಡಿಯುವುದಕ್ಕೆ ಬೋಪು ದಿವಾನರ ನಾಯಕತ್ವದಲ್ಲಿ ಮಡಿಕೇರಿಯಲ್ಲಿದ್ದ 36ನೇ ರಿಜಿಮೆಂಟಿನ ಎರಡನೇ ತುಕುಡಿಯನ್ನೂ 510 ಜನ ಜಮ್ಮಾದ ರೈತರನ್ನು ಕಳುಹಿಸಿದರು. ಇವರಲ್ಲಿ 55 ಜನರು ಮುಖ್ಯಸ್ಥರಿದ್ದರು. ಇವರಲ್ಲಿ ಬಿದ್ದಂಡ ಬೋಪಣ್ಣ, ಸುಬೇದಾರ ಬಿದ್ದಯ್ಯ, ಮಾತಂಡ ಅಪ್ಪಚ್ಚು, ಕೋಚನ ದೊಡ್ಡಯ್ಯ ಮುಂತಾದವರಿದ್ದರು.

ಈ ವಿಷಯವು ಮಂಗಳೂರಿನಲ್ಲಿದ್ದ ಕಲ್ಯಾಣ ಸ್ವಾಮಿಗೆ ತಿಳಿದಾಗ ಒಂದು ಸಾವಿರ ಜನರನ್ನು ಹುಲಿಕುಂದ ನಂಜಯ್ಯ ಚೆಟ್ಟಿಕುಡಿಯ, ಕುರ್ತುಕುಡಿಯರ ಮುಖಂಡತ್ವದಲ್ಲಿ ಸುಳ್ಯದ ಕಡೆಗೆ ಕಳುಹಿಸಿದರು. ಕಲ್ಯಾಣ ಸ್ವಾಮಿ ಸೈನ್ಯಕ್ಕೂ ಬ್ರಿಟೀಷರ ಸೈನ್ಯಕ್ಕೂ ಕಾಳಗ ನಡೆದು ಬ್ರಿಟೀಷ್ ಸೈನ್ಯವು ಸುಸಜ್ಜಿತ ಆಯುಧಗಳಾದ ಕೋವಿ ಫಿರಂಗಿಗಳ ಮುಂದೆ ನಿಲ್ಲಲಾರದೆ ಕೆಲವರು ಸತ್ತರು, ಕೆಲವರು ದಿಕ್ಕಾಪಾಲಾಗಿ ಓಡಿದರು, ದಳಪತಿಗಳಾದ ಹುಲಿಕುಂದ ನಂಜಯ್ಯ, ಸೋಮಯ್ಯ, ಚೆಟ್ಟಿಕುಡಿಯ ಕುರ್ತುಕುಡಿಯರನ್ನು ಸೆರೆ ಹಿಡಿದರು. ಸೆರೆ ಹಿಡಿದವರನ್ನು ಮಡಿಕೇರಿಗೆ ಸಾಗಿಸಿದರು.

ಈಕಡೆ ಕೊಡಗಿನಲ್ಲಿ ಗುಡ್ಡೇರ ಅಪ್ಪಯ್ಯನವರ ನೇತೃತ್ವದಲ್ಲಿದ್ದ ಸೈನ್ಯವು 1837 ನೇ ಏಪ್ರಿಲ್ 16 ನೇ ತಾರೀಖಿನಲ್ಲಿ ಮಡಿಕೇರಿ ಕೋಟೆಯನ್ನು ಮುತ್ತಲು ತಾವುನಾಡು, ನಾಲ್ಕು ನಾಡಿನ ಸ್ವಾತಂತ್ರ್ಯ ಸಂಗ್ರಾಮದ ಕಲಿಗಳೊಡನೆ ಮಡಿಕೇರಿಯ ಉತ್ತರದಲ್ಲಿ 4 ಮೈಲು ದೂರದಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚಾದ ಸೈನ್ಯವು ತನ್ನ ಪಾಳೆಯವನ್ನು ಬಿಟ್ಟು ಏಳುಸಾವಿರ ಸೀಮೆಯಿಂದ ಬರುವ ಸೈನ್ಯವನ್ನು ಕಾಯುತ್ತಿದ್ದರು.

[ಮುಂದುವರೆಯುವುದು]

ಟೀಕೆ-ಟಿಪ್ಪಣಿ

ಇತ್ತ ಗಮನ ಹರಿಸಿ

ಕೊಡಗಿನಲ್ಲಿ ಗೌಡ ಹಾಗೂ ಕೊಡವ ಜನಾಂಗದವರಲ್ಲಿ ಹಿಂದಿನಿಂದಲೂ ಭಿನ್ನಾಭಿಪ್ರಾಯಗಳು ಇತ್ತಾದರೂ ಕಾಲ ಬದಲಾದಂತೆ ಹಳೆಯದನ್ನು ಮರೆತು ರಾಜಕೀಯ ಹಾಗೂ ಸಾಮಾಜಿಕವಾಗಿ ಸಾಮರಸ್ಯ ಕಾಪಾಡಿಕೊಂಡು ಬಂದರು.

ಆದರೆ, ಇತ್ತೀಚಿನ ಕೊಡಗು ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಡುವ ಕೆ.ಆರ್. ಎಂ.ಎಂ. ಎನ್ನುವ ಸಂಘಟನೆ ಮೊದಮೊದಲು ಎಲ್ಲಾ ಜನಾಂಗದ ಜೊತೆಗೂಡಿ ಹೋರಾಡುವುದಾಗಿ ಹೇಳಿಕೊಂಡರೂ, ಸಂಘಟನೆಯ ಪ್ರಾಭಲ್ಯ ಹೆಚ್ಚಿದಂತೆಲ್ಲಾ ಅವರ ವಿರುದ್ಧ ಧ್ವನಿಎತ್ತುವವರೇ ಇಲ್ಲದಂತೆ ಜಾತಿವಾದವನ್ನು ಹುಟ್ಟು ಹಾಕುವುದರೊಂದಿಗೆ ಶಾಂತಿ ಸಹ ಬಾಳ್ವೆಗೆ ಹೆಸರಾದ ಕೊಡಗಿನ ಹಿತಕ್ಕೆ ಧಕ್ಕೆಯುಂಟು ಮಾಡಿದೆ.

ಸಂಘಟನೆಯ ವಿರುದ್ಧ ಹೇಳಿಕೆಯಿತ್ತ ಮೇಲೆ ಬಹಿರಂಗವಾಗಿ ಜಾತಿಯ ಬಣ್ಣ ಕಟ್ಟಿ ಅವರನ್ನು ಶಿಖಂಡಿಗಳೆಂದು, ಸಾಧ್ಯವಾದರೆ ನಮ್ಮ ವಿರುದ್ಧ ಹತ್ತು ಮಂದಿಯನ್ನು ರಸ್ತೆಗೆ ಇಳಿಸಿ ಎಂಬೆಲ್ಲಾ ಪ್ರಚೋಧನಕಾರಿ ಹೇಳಿಕೆಗಳನ್ನು ಕೊಡಲು ಪ್ರಾರಂಭಿಸಿದರು.

ಇದರ ಪರಿಣಾಮ ಡಿ. 3ರಂದು ನಡೆದ ಕೊಡಗು ಬಂದ್‌ನ್ನು ಕುಶಾಲನಗರ ಹಾಗೂ ಸಂಪಾಜೆಯಲ್ಲಿ ನಡೆದ ಘಟನೆ, ಅವರ ಕಾರ್ಯಕರ್ತರು ಅಂದು ನಡೆದುಕೊಂಡ ರೀತಿ, ಹಿಂದಿನ ಕೊಡಗು ರಾಜ್ಯದ ಅವರ ದಬ್ಬಾಳಿಕೆಯನ್ನು ಇಂದಿನ ಪೀಳಿಗೆಗೆ ಉಳಿಸಿ ನೆನಪಿಸಿಕೊಳ್ಳುವಂತಿತ್ತು.

ಮೊನ್ನೆ ಸ್ಥಳೀಯ ದಿನ ಪತ್ರಿಕೆಯ ಸಂಪಾದಕೀಯದಲ್ಲಿ ಹೇಳಿದಂತೆ "ಕೊಡಗಿನಲ್ಲಿ ಗೌಡ ಜನಾಂಗ ಸಂಘಟಿತರಾಗುವುದರಲ್ಲಿ ಯಶಸ್ಸು ಕಂಡಿಲ್ಲವೆಂದು" ಇದು ಸಹ ಸರಿ ಅಲ್ಲ.

ಜನಾಂಗದ ಬರುವ ಪೀಳಿಗೆಯ ಹಿತ ದೃಷ್ಟಿಯಿಂದ ಸಮಾಜದ ಪ್ರಮುಖರು ಜಿಲ್ಲೆಯಲ್ಲಿ ಇಂತಹ ಸಂಘಟನೆಯ ವಿರುದ್ಧ ಕಾಲ ಮಿಂಚುವ ಮೊದಲೇ ಗಮನ ಹರಿಸಲೆಂದು ವಿನಂತಿ.

○ **ಕುಂಭಗೌಡನ ಸೋಮಯ್ಯ,**
ಕುಶಾಲನಗರ

ದೆಹಲಿ ಗೌಡ ಸಮಾಜದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಡೆದ ಕ್ರೀಡಾ ಕಾರ್ಯಕ್ರಮ

ಭಾರತದ ಕೇಂದ್ರವಾದ ದೆಹಲಿಯಲ್ಲಿ ಈ ವರ್ಷ ಸ್ವತಂತ್ರ ಭಾರತದ ಸ್ವರ್ಣ ಮಹೋತ್ಸವದ ಪ್ರಯುಕ್ತ ದೆಹಲಿ ಕರ್ನಾಟಕ ಸಂಘ ಪ್ರಥಮಬಾರಿ ಅಕ್ಟೋಬರ್–ನವಂಬರ್ ತಿಂಗಳಲ್ಲಿ ಕ್ರಿಕೆಟ್ ಟೂರ್ನಮೆಂಟನ್ನು ನಡೆಸಿದರು. ದೆಹಲಿಯಲ್ಲಿರುವ ಕನ್ನಡಿಗರ ವಿವಿಧ ಸಂಘ ಸಂಸ್ಥೆಗಳಿಗೆ ಭಾಗವಹಿಸಲು ಒಂದು ಶುಭಾವಕಾಶವಾಯಿತು. ಈ ಪಂದ್ಯದಲ್ಲಿ ಉತ್ಸಾಹ ಭರಿತ 11 ತಂಡಗಳು ಭಾಗವಹಿಸಿದ್ದವು. ಮೊದಲನೆಯ ಹಂತದಲ್ಲಿ 'ನಾಕ್‌ಔಟ್' ಸ್ಟೇಜಿನಲ್ಲಿ ಗೆದ್ದ ಮೂರು ಟೀಂಗಳಾದ ದೆಹಲಿ ಗೌಡ ಸಮಾಜ, ದೆಹಲಿ ಕನ್ನಡ ಶಾಲೆ ಹಾಗೂ ತ್ರಿವೇಣಿ ಕನ್ನಡ ಕೂಟ ಕೊನೆಯ ಹಂತದ "ರೌಂಡ್ ರೋಬಿನ್" ಸ್ಟೇಜಿಗೆ ಬಂದವು. ರೌಂಡ್ ರೋಬಿನ್ ಪಂದ್ಯದಲ್ಲಿ ಈ ಮೂರು ಟೀಂಗಳು ತಲಾ ಒಂದೊಂದು ಜಯ–ಪರಾಜಯ ಗಳಿಸಿ ಸಮಾನಾಂತರ ಪಾಯಿಂಟ್‌ಗಳಿಸಿದವು. ಆದರೆ ರನ್‌ರೇಟಿನ ಆಧಾರದ ಮೇರೆ ದೆಹಲಿ ಕನ್ನಡ ಶಾಲೆ ಪ್ರಥಮ, ತ್ರಿವೇಣಿ ಕನ್ನಡ ಕೂಟ ದ್ವಿತೀಯ ಹಾಗೂ ದೆಹಲಿ ಗೌಡ ಸಮಾಜ ತೃತೀಯ ಬಹುಮಾನಗಳನ್ನು ಪಡೆದವು. ಬಹುಮಾನ ವಿತರಣೆಯ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ದೆಹಲಿಯಲ್ಲಿ ನಡೆಯುತ್ತಿರುವ ಮಾಸಿಕ ಕಾರ್ಯಕ್ರಮ ಸಮಾರಂಭದಲ್ಲಿ ನವಂಬರ್ 16ರಂದು ಕೇಂದ್ರ ಸರ್ಕಾರದ ಸಚಿವರಾದ ಶ್ರೀ ಎಸ್. ಆರ್. ಬೊಮ್ಮಾಯಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಮೂಲ ಗೌಡ ಜನಾಂಗದವರು ರಚಿಸಿಕೊಂಡಿರುವ 'ದೆಹಲಿ ಗೌಡ ಸಮಾಜ'ದ ಅಧ್ಯಕ್ಷರಾದ ಶ್ರೀ ನಿಡ್ಯಮಲೆ ಮಾಧವರವರು ಉಪಾಧ್ಯಕ್ಷರಾದ ಶ್ರೀ ಕುಯ್ಯಮುಡಿ ವಸಂತ ಹಾಗೂ ಕಾರ್ಯದರ್ಶಿಯಾದ ಶ್ರೀ ಮೂಟೇರ ಮುದ್ದಪ್ಪರವರ ಹೆಚ್ಚಿನ ಆಸಕ್ತಿಯಿಂದ ಯುವ ಪೀಳಿಗೆಗೆ ಪಂದ್ಯದಲ್ಲಿ ಭಾಗವಹಿಸಿ ಪ್ರಥಮ ಹಂತದಲ್ಲೇ ದೆಹಲಿ ಕನ್ನಡಿಗರ ಮೆಚ್ಚಿಗೆ ಹಾಗೂ ಬಹುಮಾನ ಪಡೆಯುವಂತಾಯಿತು. ಕ್ರಿಕೆಟ್ ತಂಡದ ನಾಯಕರಾಗಿ ಶ್ರೀ ಎಂ.ಎಸ್. ರವಿಯವರು ಯಶಸ್ವಿಯಾಗಿ ಕಾರ್ಯಭಾರ ನಿರ್ವಹಿಸಿದರು.

ನಿಮ್ಮ ಪತ್ರಗಳು

ಪ್ರತಿಕ್ರಿಯೆ

ಮಾನ್ಯರೆ,

"ಕೊಡಗು ಸಂಗಾತಿ"ಯೆಂಬ ಪತ್ರಿಕೆ ಎಲ್ಲರ ಮನೆ ಮನೆಗೆ ಬರುತ್ತಿರುವುದು ತುಂಬಾ ಹೆಮ್ಮೆಯ ವಿಷಯವಾಗಿದೆ. ಈ ಪತ್ರಿಕೆಯನ್ನು ಕಳುಹಿಸುವವರು ಯಾರ ಒಪ್ಪಿಗೆಯನ್ನು ಪಡೆದು ಕಳುಹಿಸಬೇಕಾಗಿಲ್ಲ. ನ್ಯೂಸ್ ಪೇಪರಲ್ಲಿ ಕೊಡಗು ಸಂಗಾತಿಯೆಂಬ ಪತ್ರಿಕೆ ಪ್ರಾರಂಭವಾಗಿದೆ ಎಂದು ತಿಳಿಸಿದರೆ, ಈ ಪತ್ರಿಕೆ ಹೇಗಿದೆ ? ಅದರಲ್ಲಿ ಏನಿದೆ ? ಎಂದು ತಿಳಿಯುವುದಿಲ್ಲ ವಾದ ಕಾರಣ "ಕೊಡಗು ಸಂಗಾತಿ" ಪತ್ರಿಕೆಯನ್ನು ಯಾರ ಅಪ್ಪಣೆಯಿಲ್ಲದೆಯೇ ವಿಳಾಸ ಹುಡುಕಿ ಕಳಿಸಿದರೆ ಮಾತ್ರ ಅದರ ಬಗ್ಗೆ ಅರ್ಥವಾಗುವುದು. ಆದುದರಿಂದ ಯಾರ ಅಪ್ಪಣೆಯಿಲ್ಲದೆ ಈ ಪತ್ರಿಕೆಯನ್ನು ಕಳಿಸುತ್ತಿರುವುದು ಯಾರಿಗೂ ವಂಚಿಸಿದಂತಾಗುವುದಿಲ್ಲ. ಮತ್ತು ಯಾವ ಮಹಾ ದೊಡ್ಡ ತಪ್ಪು ಅಲ್ಲ.

ಇದೊಂದು ಪತ್ರಿಕೆ ಶುರುವಾದ ವಿಷಯ ಗೊತ್ತಾಗಿ ಹಲವಾರು ಜನರು ಪತ್ರ ಬರೆದು ಇನ್ನು ಮುಂದೆ ಈ ಪತ್ರಿಕೆಯನ್ನು ಈ ವಿಳಾಸಕ್ಕೆ ಮರೆಯದೆ ಕಳುಹಿಸಿ ಎಂದು ಪತ್ರಗಳು ಬಂದಿರುವಾಗ ಯಾರೋ ಒಬ್ಬರು ತಮ್ಮ ಒಪ್ಪಿಗೆಯಿಲ್ಲದೆ ಕೊಡಗು ಸಂಗಾತಿಯನ್ನು ಕಳಿಸುತ್ತಿರುವುದು ದೊಡ್ಡತಪ್ಪು ಹಾಗೂ ವಂಚನೆ ಎಂದು ಹೇಳಿರುವುದು ತುಂಬಾ ಬೇಸರದ ವಿಷಯ.

ಇದೇ ರೀತಿ ಹಲವಾರು ಪತ್ರಿಕೆಗಳು ನನಗೆ ಬಂದರೂ ನಮ್ಮ ಜನಾಂಗದ ಪತ್ರಿಕೆಯೊಂದು ಬಂದಾಗ ನನಗೆ ಆ ಸಂತೋಷವೇ ಬೇರೆಯಾಗಿರುತ್ತದೆ. ಇದರಿಂದ ಮುಖ್ಯವಾಗಿ ನಿಗೂಢವಾಗಿರುವಂತ ಹಲವಾರು ಲೇಖಕರಿಗೆ ಬೆಳಕನ್ನು ಕಾಣಲು ಕೊಡಗು ಸಂಗಾತಿಯೊಂದು ಕೈದೀಪವಾಗಬಹುದು. ಇದುವರೆಗೆ ಕಥೆ, ಕವನಗಳು ಮತ್ತು ಮಾನಸಿಕ ಅನಿಸಿಕೆಗಳನ್ನು ಬರೆದು ಜನರ ಮುಂದಿಡಲು, ಅನಾನುಕೂಲ ಹಾಗೂ ಅವಕಾಶ ಸಿಕ್ಕದ ಎಷ್ಟೋ ಬರಹಗಾರರಿಗೆ ಕೊಡಗು ಸಂಗಾತಿಯು ಅವಕಾಶ ನೀಡಿ ಅಂತಹ ಬರಹಗಾರರನ್ನು ಕರೆದು ಪ್ರೋತ್ಸಾಹ ನೀಡುತ್ತಿರುವುದು. ಅದರಿಂದ ನಾವು ಇದುವರೆಗೆ ಕಾಣದ, ಕೇಳರಿಯದ ಎಷ್ಟೋ ಬರಹಗಾರರು ಬರೆದ ಲೇಖನಗಳನ್ನು ಓದಿ ನಮ್ಮಲ್ಲಿಯೂ ಒಳ್ಳೊಳ್ಳೆಯ ಬರಹಗಾರರು ಇರುವರೆಂದು ಕೊಡಗು ಸಂಗಾತಿಯಿಂದಾಗಿ ತಿಳಿಯಬಹುದಾಗಿದೆ.

ಅದಕ್ಕಾಗಿ "ಕೊಡಗು ಸಂಗಾತಿ"ಯು ನಾಡಿನಲ್ಲೆಡೆ ಹರಡಲಿ ಎಂದು ಆಶಿಸಿ ನನ್ನ ಮನಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿರುವೆನು.

O ಹೊದ್ದೆಟ್ಟಿ ಭವಾನಿಶಂಕರ್, ಬೆಂಗಳೂರು

ಯಾವ ಸಂಶಯವೂ ಇಲ್ಲ

ಮಾನ್ಯರೆ,

"ಕೊಡಗು ಸಂಗಾತಿ" ಪತ್ರಿಕೆಯಲ್ಲಿ ಈಗ ಎರಡು ಮೂರು ಸಂಚಿಕೆಯಲ್ಲಿ ಪ್ರಕಟವಾದ ಗೌಡ ಸಂಸ್ಕೃತಿ ಅಕಾಡೆಮಿ, ಗೌಡ ಮಹಿಳಾ ಸಂಘಟನೆ, ಗೌಡ ಪ್ರತಿಭಾ ಪ್ರದರ್ಶನ ಮುಂತಾದವುಗಳನ್ನು ಏರ್ಪಡಿಸುವುದಕ್ಕೆ ಕೊಡಗು ಸಂಗಾತಿಯ ಪ್ರಕಟನೆಯೇ ಕಾರಣವೆಂದು ನನಗನಿಸಿದೆ. ಇದಕ್ಕೆಲ್ಲಾ ಸ್ಫೂರ್ತಿಯಾಗಿ ನೀವು ಕೈಕೊಳ್ಳುವ ಕಾರ್ಯಗಳು ಗೌಡ ಸಮಾಜದಲ್ಲಿ ಈ ಶತಮಾನದಲ್ಲಿ ಸಾಧಿಸಲಾಗದೆ ಇದ್ದ ಸಾಧನೆಗಳೆಂದು ಹೇಳಿದರೆ ಅತಿಶಯೋಕ್ತಿಯಾಗದು. ಜನ ಜಾಗೃತಿ ಮೂಡಿಸುವ ಕೆಲಸವನ್ನು ನೀವು ಮಾಡುತ್ತಿರುವಿರಿ. ನಾವು 1968ರಲ್ಲಿ ಕಂಡ ಕನಸು ಈಗ ಕೈಗೂಡುತ್ತಿರುವುದನ್ನು ಓದಿ ನನ್ನ ಮನಸ್ಸು ತೃಪ್ತಿಗೊಂಡಿದೆ. ಈ ರೀತಿ ಇನ್ನೂ ಪ್ರಗತಿ ಸಾಧಿಸಿದರೆ ಗೌಡ ಸಮಾಜದ ಭದ್ರ ಬುನಾದಿ ಧೃಡಗೊಂಡು ಒಂದು ಸುವ್ಯವಸ್ಥಿತ ಬಲಾಢ್ಯ ಸಮಾಜವಾಗಿ ಹೊರ ಹೊಮ್ಮುವುದರಲ್ಲಿ ಯಾವ ಸಂಶಯವೂ ಇಲ್ಲ.

O ಪೂಜಾರಿ ಮೊಣ್ಣಪ್ಪ, ಬೆಂಗಳೂರು.

ಕನ್ನಡ ಅಂಕೆ ಬಳಸಿ

ಮಾನ್ಯರೆ,

"ಕೊಡಗು ಸಂಗಾತಿ" ಕನ್ನಡ ಪಾಕ್ಷಿಕ ಪತ್ರಿಕೆ ಆದುದರಿಂದ, ವ್ಯವಹಾರಗಳೆಲ್ಲ ಕನ್ನಡದಲ್ಲಿಯೇ ಆಗಿದೆ. ಆದರೆ ಅಂಕೆಗಳನ್ನು ಮಾತ್ರ ಆಂಗ್ಲ ಅಂಕೆಗಳನ್ನು ಬಳಸುತ್ತಿದ್ದೀರಿ. ಇದರ ಬದಲು ಕನ್ನಡ ಅಂಕೆಗಳನ್ನು ಬಳಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

O ಹುಲಿಮನೆ ರಾಮಣ್ಣ ಲೋಕೇಶ, ಮದೆ

ಅಮರವಾಗಿ ಬೆಳೆಯಲಿ

ನಮ್ಮ ಗೌಡ ಜನಾಂಗದ ಅರೆಭಾಷೆಯು "ಕೊಡಗು ಸಂಗಾತಿ"ಯೊಡನೆ ಸೇರಿ, ಎಲ್ಲರ ಮನವೊಲಿಸಿ, ಅನೇಕ ಅಭಿಮಾನಿಗಳಿಂದ ಮೆಚ್ಚುಗೆಗೆ ಪಾತ್ರವಾಗಿ ಸದಾ "ಅಮರವಾಗಿ ಬೆಳೆಯಲಿ" ಎಂದು ಹಾರೈಸುವ.

Oಹುಲಿಮನೆ ಕೆ. ಸಹದೇವ, ಮದೆನಾಡು

ಅರೆ ಭಾಷಿಕ ವಿಭಾಗ

ಮುಂದೇನ್ ಗತಿ....?

ಆನೆ ಬೆಳ್ಯಪ್ಪ ಶೇಖರ, ಚೆಟ್ಟಿಮಾನಿ

ಅಂದ್ ಅಂಗಡಿಗೆ ಹೋದ ಚನ್ನಯ್ಯಂಗೆ ಪೋಸ್ಟ್‌ಮ್ಯಾನ್ ತಂದ್ ಕೊಟ್ಟ ಕಾಗ್ದ, ಅದ್ ಬರೀ ಕಾಗ್ದ ಅಲ್ಲ, ಗವರ್ನ್‌ಮೆಂಟ್ ಚಾಕರಿಗೆ ಆರ್ಡರ್ ಬಂದುಟ್ಟುತ ನೋಡ್‌ಕನ, ದೇವರೆ ಮುಂದುಗಡೆ ಪ್ರತ್ಯಕ್ಷ ಆದಂಗೆ ಆತ್. ಹೆಣ್ಣ್ ಮಕ್ಕಳ್‌ನ ಬುಟ್ಟ್ ಹೋದು ತೇಳ್‌ಕಾಕನ ಅಷ್ಟೇ ಬೇಸರನೂ ಆತ್. ಏನ್ ಮಾಡ್ದು, ಕೆಲ್ಸ ಬುಟ್ಟರೆ ಸಿಕ್ಕುದುಲೆಲ್ಲ ತೇಳಿ ಹೊರಡುವ ನಿರ್ಧಾರ ಮಾಡ್ತ್. ಮಕ್ಕಳ ಲಾಯ್ಕ ನೋಡಿಕ, ಮನೆಯ ಮರೊಟ್ಟಗೆಲ್ಲ ಹೊಂದಾಣಿಕೆ ಮಾಡಿಕಂಡ್, ಕೆಲ್ಸಗಳ ಮಾಡಿಕಂಡ್ ಇರೊಕುತ ಹೆಣ್ಣ್ ಪದ್ಮಾವತಿಗೆ ಹೇಳಿ ಚನ್ನಯ್ಯ ಬಳ್ಯಾರಿ ಗಾಡಿ ಹತ್ತಿತ್ತ್.

ಪದ್ಮಾವತಿ ಎರಡ್ ಮಕ್ಕಳ ಅವ್ವ. ಆದರೂ, ಒಳ್ಳೆ 16 ವರ್ಷ ಪ್ರಾಯುದವ ರಂಗೆ ಕಾಣ್‌ತ್ತಿತ್. ರೂಪವತಿಯಾದ ಹೆಣ್ಣ್ ಮನೇಲಿ ಇರ್ದು ತೇಳ್‌ಕಾಕನ ಸುತ್ತ ಮುತ್ತ ಹೈದಂಗ ನಾಲ್ಕ್ ಕಣ್ಣ್‌ಲಿ ನೋಡಿಕೆ ಸುರು ಮಾಡ್ದೊ. ಅದ್ರಲ್ಲೂ ರಂಗಯ್ಯಂದ್ ಎತ್ತಿದ ಕೈ. ಅಂವ ಬಲೆ ಬೀಸಿರೆ ತಪ್ಪುವಂಗೆ ಇಲ್ಲೆ. ದಾರಿಲಿ, ಓಣೆಲಿ, ನೀರಿಗೋದಲ್ಲಿ, ಅಲ್ಲಿ-ಇಲ್ಲಿ ಕಾಲ್‌ಗಂಟೆ, ಅರ್ಧಗಂಟೆ ಪದ್ಮಾವತಿನೊಟ್ಟಗೆ ಮಾತಾಡಿಕೆ ಸುರು ಮಾಡ್ದೊ.

"ಅಲ್ಲ ನೀಲಕ್ಕ, ರಂಗಯ್ಯ ಪದ್ಮಾವತಿ ನೊಟ್ಟಗೆ ಬಾರಿ ಮಾತಾಡ್ದೆ." ಮಾತಾಡ್ದು ಇರ್ಲಿ ಚಿನ್ನಕ್ಕ, ಮೊನ್ನೆ ಅಡಿಗೆ ಮನೇಲಿ ಮುಕ್ಕಾಲ್ ಮಡಗಿ, ಒಲೆ ಬುಡಲಿ ಕುದ್ದ್‌ಕಂಡ್ ಮಾತಾಡ್‌ತ್ತಿದ್ದದ್ದ್ ನಾನ್ ಕಣ್ಣಾರೆ ನೋಡ್ದೆತ. "ಇದೆಲ್ಲ ನೋಡ್‌ರೆ ಅವ್ಕೆ ಇಬ್ಬರಿಗೆ ಸಿನೆಯ [ಪ್ರೀತಿ] ಸುರಾಗುಟ್ಟ್ ಕಂಡದೆ." ಅಯ್ಯೋ ನೀಲಕ್ಕ ಆ ರಬಚ್ಚಿನ ಕಿವಿಗೆ ಸಿಕ್ಕಿರೆ ನಮ್ಮನ ಮಡ್ಗಿಕಿಲ್ಲೆ ನಮ್ಗೆ ಬ್ಯಾಡಪ್ಪ ಅದರ ವಿಷಯ.

ರಂಗಯ್ಯನ ಹೋಗಟೆ ಬರಟೆ ಜಾಸ್ತಿ ಆದಂಗೆ ಮಕ್ಕಳಿಗೆ ಮಿಠಾಯಿ ತಿಂದ್ ತಿಂದ್ ಹುಳ ಹಲ್ಲ್ ಬ್ಯಾನೆ ಸುರು ಆಗಿ ಬುಟ್ಟತ್. ಹಿಂಗಿರ್‌ಕಾಕನ ಚನ್ನಯ್ಯ ಒಂದು ವಾರ ರಜಲಿ ಮನೆಗೆ ಬಾತ್. ಹೆಣ್ಣ್‌ನ ಮಾತುಕತೆಲಿ ತುಂಬಾ ಬದಲಾವಣೆ ಕಾಣ್‌ತ್ತಿತ್ತ್. ರಜೆ ನಾಲ್ಕ್ ದಿನ ಕಳೆಯಕಾಕನ "ಪೊಪ್ಪ ನೀನ್ ರಜೆಲಿ ಬಂದಮೇಲೆ ಆಚೆ ಮನೆ ಭೋಜಪ್ಪ ನಮಿಗೆ "ಕುಕ್ಕಿಸ್ ಮಿಠಾಯಿ" ತಾದೇಲೆ, ನೀನ್ ಬಾರದಿರ್‌ಕಾಕನ ಯಾಗೋಳ್ ಬಂದ್ ನಮಿಗೆ ಮಿಠಾಯಿ ಕೊಡೆತ್ತಿದ್ದೊ. ಈ ಮಕ್ಕಳ ಮಾತ್, ಹೆಣ್ಣ್‌ನ ಸುಡು ಸುಡು ಆಟಗಳ ನೋಡಿ ಚನ್ನಯ್ಯಂಗೆ ಹೆಣ್ಣ್‌ನ ಮ್ಯಾಲೆ ಬಾರಿ ಡವುಟ್ ಬಾತ್. ಇದರ ಹಿಂಗೆ ಬುಟ್ಟರೆ ಆಕಿಲೆ, ಹೆಂಗಾರ್ ಮಾಡಿ ಕಂಡ್ ಹಿಡಿಯೋಕು ತೇಳಿ ಒಂದ್ ಉಪಾಯ ಮಾಡ್ತ್.

ಮಾರನೇ ದಿನ ಸಾಯಂಕಾಲ ಚನ್ನಯ್ಯ ಮಾಮೂಲಿ ರಜೆ ಮುಗಿಸಿಕಂಡ್ ಹೋಗುವಂಗೆ ಹೆಣ್ಣ್ ಮಕ್ಕಳಿಗೆಲ್ಲ ಹೇಳಿ ಹೊರಟ್ ಹೋದಂಗೆ ಮಾಡಿ ಹಿಂದೆನ ಬಾಗಿಲ್‌ಂದ ಬಂದ್‌ಬುಟ್ಟ್ ಅಟ್ಟಕ್ಕೆ ಹತ್ತಿ ಕುದ್ದ್ ಕಂಡತ್. ಸ್ವಲ್ಪ ಹೊತ್ತಿಗೆ ಹೆಣ್ಣ್ ಅಕ್ಕಿ ಬೀಸಿಕೆ ಸುರ್ ಮಾಡ್ತ್. ಚನ್ನಯ್ಯ ರಜೇಲಿ ಹೋದ ವಿಷಯ ತಿಳ್ದ್, ಅದೇ ಹೊತ್ತಿಗೆ ರಂಗಯ್ಯ ಒಂದು ಕಡೆ ಅಂಗಳಲಿ ಬರ್‌ತುಟ್ಟ್, ಮತ್ತೊಂದು ಕಡೆ ಅಟ್ಟದ ಕಿಂಡೀಲಿ ಅಣಗಿ ಕುದ್ದ್ ನೋಡುವ ಗಂಡನ ಹೆಣ್ಣ್ ಒಂದೇ ಸಲ ನೋಡ್‌ಕಾಕನ, ಏನ್ ಮಾಡಕುತ್ತ ಗೊತ್ತಾಗದೆ, "ಇಂದ್ ನನ್ನ ಗಂಡ ಕೊಲೆ ಮಾಡ್ದು ಗ್ಯಾರೆಂಟಿತ ಗ್ಯಾನ ಮಾಡಿ ಪದ್ಮಾವತಿ ಬುದ್ಧಿ ಉಪಯೋಗಿಸಿ ಒಂದ್ ಹಾಡ್ ಹೇಳಿಕೆ ಸುರು ಮಾಡ್ದೆ. "ಸುತ್ತ ಮುತ್ತ ಬರಬೇಡ ನನಗಾಗಿ, ಮೇಲೊಬ್ಬ ಕುಳಿತವನೆ ನಿನಗಾಗಿ" ಈ ಹಾಡ್‌ನ ಕೇಳಿ ಅರ್ಥಮಾಡಿಕಂಡ್ ರಂಗಯ್ಯ ಅಲ್ಲಿಂದ ಮೆಲ್ಲ ಜಾಗ ಖಾಲಿ ಮಾಡ್ತ್. ಆಗ ಪದ್ಮಾವತಿಗೆ ಸ್ವಲ್ಪ ಜೀವ ಬಂದಂಗೆ ಆತ್.

ಅಕ್ಕಿ ಬೀಸಿ ಹೆಣ್ಣ್ ಅಡಿಗೆ ಮನೆಗೆ ಹೋದ ಮೇಲೆ ಅಟ್ಟಂದ ಇಳ್ದ್ ಬಂದ ಚನ್ನಯ್ಯ ಬಸ್ ತಪ್ಪಿ ಮನೆಗೆ ಬಂದವ ರಂಗೆ ನಟನೆ ಮಾಡಿಕಂಡ್ ಬಂದ್ ಹೆಣ್ಣ್‌ನ ಕೇಳ್ತ್ "ಅಲ್ಲಾ, ಆಗಲೇ ಒಂದ್ ಹಾಡ್ ಹೇಳ್‌ತ್ತಿದ್ದಲ್ಲಾ ಅದರ ಅರ್ಥ ಸ್ವಲ್ಪ ಹೇಳಿಯು. ಅದ್ಕೆ ಹೆಣ್ಣ್ "ಅದ್ ಗಾಣಲಿರುವ ನೊಕ್ಕಳನ ಮೀನ್ ತಿಂಬಕ್ಕೆ ಬಾಕಾಕನ ನೊಕ್ಕಳ ಹೇಳುವ ಮಾತ್." ನೀನ್ ನನ್ನ ತಿಂಬಕೆ ಬಂದರೆ ನಿನ್ನ ತಿಂಬವ ಮೇಲೆ ಕುದ್ದುಟ್ಟ್ ತೇಳುದು ಇದರ ಅರ್ಥ ಅಂತೇಳ್ತ್. ಹೆಣ್ಣ್‌ನ ಈ ಮಾತ್‌ನ ಕೇಳ್ದ ಚನ್ನಯ್ಯ ನೆನಸಿಕಂಡತ್. ಮದುವೆ ಆಕೆ ಮೊದ್ಲೇ ಹೇಳ್ದ ಅವ್ವನ ಮಾತ್‌ನ. "ಒಳ್ಳೆ ಮರ್ಯಾದಸ್ತರ ಮನಸ್ತಾನಂದ, ಬಣ್ಣ ಇಲ್ಲದಿದ್ದರೂ ಒಳ್ಳೇ ಗುಣ ಇರುವ ಗೂಡೆನ ಮದ್ವೆ ಆಗ್. ಆ ಗೂಡೆನ ಮದುವೆ ಆದು ಬ್ಯಾಡತ. ಹೆಂಗೆ ಹೇಳೂ ಅವ್ವನ ಮಾತ್ ಮೀರಿ ಪದ್ಮಾವತಿನ ಮದುವೆ ಆದಕ್ಕೆ ಇಂದ್ ಪಶ್ಚಾತಾಪ ಪಡಿಕೆ ಆತ್‌ತ ತಿಳ್‌ಕಂಡರೂ, ಚನ್ನಯ್ಯ ಅವಳ ಬುದ್ಧಿ ಚುರುಕುಗೆ ಮೆಚ್ಚಿ ಮನಸ್ಸಿಗೆ ಸಮಾಧಾನ ಮಾಡಿಕಂಡ್, ನಾನ್ ಅಲ್ಲಿಯಾದರ್ ನೆಮ್ಮದಿಲಿ ಬದುಕಿನೆ ತೇಳಿ ಬಳ್ಯಾರಿ ಗಾಡಿ ಹತ್ತಿ ಡ್ಯೂಟಿಗೆ ಹಾಜರಾತ್. ○

ಕೂಡ್ ಬ್ಯಾಟೆಗೆ ಹೋದ್

ಒಂದ್ ದಿನ ಊರೊವು ಸೇರಿ ಕೂಡ್ ಬ್ಯಾಟೆಗೆ ಪೋಯಿಂತ ಏರ್ಪಾಡ್ ಮಾಡ್ಚೊ. ಪೋಯಿಂತ ಎಲ್ಲವೂ ಒಪ್ಪಿಕಂಡ್ ಶನಿವಾರ ಬೆಳಿಗ್ಗೆ 7 ಗಂಟೆಗೆ ಆಲದ ಕಟ್ಟೆಗೆ ಬನ್ನಿಂತ ಒಪ್ಪಚಾರ ಮಾಡಿ ಹೋದೊ. ಬೆಳ್ಗಿ 7 ಗಂಟೆಗೆ ಎಲ್ಲವು ಬಂದ್ ಸೇರ್ದೊ. ಅದರ್ಲಿ ಒಬ್ಬ ಬಾತ್ಲೆ. ಇವನ ಎಷ್ಟ್ ಹೊತ್ತ್ ನೋಡ್ದು ತೇಳಿ, ಮುಂದೆ ಬಂದವು ಪೋಯಿ, ಅಂವ ಹಿಂದೆಂದ ಬರ್‍ಲೆಂತ ಬಾಕಿದ್ದವು ಹೋದೊ. ಇಂವ ಬಾಕಾಕನ ಸ್ವಲ್ಪ ಹೊತ್ತಾಗಿತ್ತ್. ಇಂವ ಮುಂದೆ ಹೋದವನರ ಕೂಟ್ ಹಿಡಿಯಕೆ ಬೇಗ ಬೇಗ ನಡ್ತ್. ಎಲ್ಲಿ ನೋಡ್ರು ಮುಂದೆ ಹೋದವರ ಪತ್ತೇ ಇಲ್ಲೆ. ನಾಯಿ ಕೂಡ್ದು, ಚೂ ಕೂಡ್ದು ಕೇಳ್ದೆ. ಗುಂಡು ಸದ್ದ್ ಸ ಕೇಳ್ದೆ. ಇಂವ ಒಂದ್ ಕಡೆ ಕುದ್ದ್, ಜಾತಿ ಹೊಡ್ಕಂಡ್ ಇಂವ ಕುದ್ದಲ್ಲಿಗೆ ಈಗ ಬಾವೋ, ಆಗ ಬಾವೋಂತ ಎಷ್ಟು ಪಾರಕಾದರೂ ಇವರ ಕಾಂಬೊದೇಲೆ. ಇಂವ ಕಾಡೊಳಗೆ ಹೋಗಿ ಹೋಗಿ ಬನಕ್ಕೆ ಸೇರ್ತ್. ಅಲ್ಲಿ ಇವಂಗೆ ಯಾರ್‍ದ್ದೋ ಮಾತ್ ಕೇಳ್ದಂಗೆ ಆತ್. ಮೆಲ್ಲೆ ಒಂದ್ ಮರ ಹತ್ತಿ ಕುದ್ದ್‌ಕಣ್ತ್. ಸ್ವಲ್ಪ ಹೊತ್ತಿಗೆ ಸುಮಾರ್ ಜನ ಒಂದ್ ಕಡವೆನ ಹೊತ್ತ್‌ಕುಡ್ ಬಾದು ಕಂಡತ್. ಅವ್ರ ನೋಡ್ರೆ ಅವು ಇವನ ಕೂಟವು ಅಲ್ಲ. ಇವರ ನೋಡಿ ಹೆದ್ರಿಕೆ ಆಗುತ್ತಟ್ಟು. ಅವರ ಪೈಕಿ ಒಬ್ಬ ಯಜಮಾನ. ಯಜಮಾನ ಹೇಳ್ದಂಗೆ ಕೆಲ್ಸ ಮಾಡಕು. ಸ್ವಲ್ಪನೂ ಹೆಚ್ಚಿಕಮ್ಮಿ ಆಕೆ ಬೊತ್ತು. ಇಂವ ಮರಲಿ ಕುದ್ದ್‌ಕಂಡ್ ಮರ್‍ಡ್ಕಾಕನ ಇವನಕಣ್ಣೀರ್ ಆ ಯಜಮಾನನ ಕೈಮೇಲೆ ಬಿದ್ದದೆ. ಯಜಮಾನ ಇದೆಂತ, ಮೇಲೆಂದ ನೀರ್ ಬೀಳ್ತುಟ್ಟುತ ಮ್ಯಾಲೆ ನೋಡ್ತ್. ಇಂವ ಕಪ್ಪೆನಂಗೆ ಮರನ ತಬ್ಬಿ ಕುದ್ದದ್ ಕಂಡತ್. ಆಗ ಯಜಮಾನ ಕೈ ಭಾಷೆ ಮಾಡಿ ಸುಮ್ಮನೆ ಕುದ್ದ್‌ಕತ ಹೇಳ್ತ್. ಆಗ ಇವಂಗೆ ಇನ್ನಷ್ಟ್ ನಡ್‌ಗಟ ಸುರಾತ್, ಪುನಃ ಯಜಮಾನ ನ್ಯಾಲೆ ನೋಡ್ಕಾಕನ ಇಂವ ನಡುಗುದ್ ಕಂಡ್ ಹೆದ್ರಿಬಡ, ನಾನೊಳೆತ ಕೈ ಭಾಷೆ ಮಾಡಿ ಹೇಳ್ತ್. ಅಲ್ಲಿಂದ ಇವಂಗೆ ಸ್ವಲ್ಪ ಧೈರ್ಯ ಬಾತ್. ಬಾಕಿದ್ದವು ಕಡಿವೆನ ಶುದ್ಧ ಮಾಡಿ, ಕಪೆದು, ತರ್‍ಚುದು ಮಾಡ್ವೆ. ಇವ್ಕೆ ಅವನ ಗೊತ್ಲೆ. ಎಲ್ಲಾ ಕೆಲ್ಸ ಆತ್. ಮಾಂಸ ಪಾಲ್ ಹಾಕ್‌ಕಾಕನ ಒಂದ್ ಪಾಲ್ ಜಾಸ್ತಿ ಹಾಕಿತ ಯಜಮಾನ ಹೇಳ್ತ್. ಪಾಲ್ ಹಾಕಿ ಎಲ್ಲವು ಅವರವರ ಪಾಲ್‌ನ ತಕಂಡ್ ಹೋದೊ. ಇವೆಲ್ಲ ಹೋದ ಮ್ಯಾಲೆ ಯಜಮಾನ ಇವಂಗೆ ಇಳಿಯಕೆ ಹೇಳ್ತ್. ಇಳ್ದ ಮೇಲೆ ಏನ್ ಸಂಗತಿ, ಯಾಕೆ ಬಂದದ್, ತ ಎಲ್ಲಾ ಕೇಳ್ತ್. ಆಗ ಇಂವ ನಾವು ಊರೊವು ಸೇರಿ ಇಂದ್ ಬ್ಯಾಟೆಗೆ ಪೋಯಿಂತ ಒಪ್ಪಚಾರ ಮಾಡಿ ಬಂದ್ ಆಲದ ಕಟ್ಟಿಲಿ ಸೇರುಂಕುಂತೇಳಿದ್ದೊ. ಆದ್ರೆ ನಾನ್ ಬಾಕಾಕನ ಸ್ವಲ್ಪ ತಡಾತ್. ಮುಂದೆ ಬಂದವು ನನ್ನ ಬುಟ್ಟ್ ಹೊಗ್ಬೊಟೊ. ನಾನ್ ಅವು ಮುಂದೆ ಸಿಕ್ಕುಂವೊತೇಳಿ ಬಂದೆ. ಎಲ್ಲಿ ನೋಡ್ರೂ ಇಲ್ಲೆ. ನಿಮ್ಮದೇ ಸದ್ದ್ ಕೇಳ್‌ತಿತ್ತ್. ನಾನ್ ನಮ್ಮವು ತೇಳಿ ಬಂದೆಂತ ಹೇಳ್ತ್. ಆಗ ಯಜಮಾನ ಹೇಳ್ತ್, ಪ್ರತಿ ಶನಿವಾರ ಮತ್ತೆ ಬುಧವಾರ 2 ದಿನ ನಮ್ಮ ಬ್ಯಾಟೆ ನೀನ್ ಇನ್ನ್ ಮುಂದಕ್ಕೆ. ಪ್ರತಿ ಶನಿವಾರ ಇಲ್ಲಿ ಬಂದ್ ಕುದ್ದ್‌ಕ. ನಾವು ಬ್ಯಾಟೆ ಮಾಡಿ ಮಾಂಸ ಪಾಲ್ ಮಾಡಿ ತಕಂಡ್ ಹೋದ ಮ್ಯಾಲೆ ನೀನ್ ಉಳ್ದ ಪಾಲ್‌ನ ತಕ್ಕಂಡ್ ಹೋಗು. ಮತ್ತೆ ಈ ಸಂಗತಿನ ಯಾರಿಗೂ ಹೇಳ್ಕೆ ಬೊತ್ತು. ಎಲ್ಲಿಯಾರ್ ಹೇಳ್ದೆಂತ ಗೊತ್ತಾದ್ರೆ ನೀನ್ ಸತ್ತ್ ಹೋದಿಯ. ಗೊತ್ತಾತ! ತನಾಸೆ ಮಾಡ್ಬಡಾಂತೇಳಿ ಅವನ ಕಾಡೊಳಗಿಂದ ಕರ್‍ಕಂಡ್ ಬಂದ್ ದಾರಿಗೆ ಬುಟ್ಟ್ ಹೋತ್. ಹಂಗೆ ಇಂವ ಪ್ರತಿ ಶನಿವಾರ ಹೋಗಿ ಹೇಳ್ದ ಜಾಗಲಿ ಕುದ್ದ್‌ಕಂಡದೆ.ಅವು ಬಂದ್ ಜಾತಿನ ಶುದ್ಧ ಮಾಡಿ, ಮಾಂಸ ಪಾಲ್ ಹಾಕಿ ಒಂದ್ ಪಾಲ್ ಜಾಸ್ತಿ ಇಟ್ಟವೆ. ಅವೆಲ್ಲಾ ಅವರವರ ಪಾಲ್‌ನ ತಕ್ಕಂಡ್ ಹೋದಮ್ಯಾಲೆ ಇಂವ ಹೋಗಿ ತಕ್ಕಂಡ್ ಇವನ ಮನೆಗೆ ಬಾದು. ಹಿಂಗೆ 2–3 ವರ್ಷ ಕಳ್ತ್. ಒಂದ್ ದಿನ ಇವನ ಹೆಣ್ಣ್ ಅಲ್ಲಾ, ನೀವು ಪ್ರತಿ ಶನಿವಾರ ಎಲ್ಲಿಂದ ಮಾಂಸ ತಕ್ಕಂಡ್ ಬಾದುತ ಕೇಳ್ತ್. ಇಂವ, ಇದೆಲ್ಲಾ ನಿಂಗ್ಯಾಕೆ ? ತಂದದರ ಸುಮ್ಮನೆ ತಿಂಬೊದು ತಾನೆ ತ ಹೇಳ್ತ್. ಅದ್ಕೆ ಅವ್ಳು ಇಲ್ಲೆ ನಂಗೆ ನೀವು ಹೇಳಕುಂತ ಹಠ ಮಾಡ್ತ್. ನೀವು ಹೇಳ್ದೆ ಹೋದರೆ ನಾನ್ ನಿಮ್ಮ ಕಾಲ್ ಬುಡಲೆ ನಾಳಿ ಕೊಯ್ಕಂಡ್ ಸತ್ತನೇಂತೇಳ್ತ್. ಆಗ ಇಂವ ಸಂಗತಿನ್ನೆಲ್ಲಾ ಹೆಣ್ಣಿಗೆ ಹೇಳ್ತ್. ಎಲ್ಲಾ ವಿಷ್ಯ ಹೇಳಿ ಆತ್ ತೇಳ್ಕನ ಅಂವ ಅಲ್ಲೆ ಬಿದ್ದ್ ಸತ್ತ್ ಹೋದೆ. ಆಗ ಹೆಣ್ಣಿಗೆ ನಾನ್ ಯಾಕೆ ಕೇಳ್ದೆಂತ ಮರ್‍ಡಿಕೆ ಸುರ್ ಮಾಡ್ತ್. [ಇದು ಐಯ್ಯಪ್ಪ ದೇವರ ಬ್ಯಾಟೆಯ ಚರಿತ್ರೆ].

○ಮಂಞಂಡ್ರ ಬಿ. ಕುಂಞಪ್ಪ,
ಯವಕಪಾಡಿ ಗ್ರಾಮ.

ಗಂಡೊಬ್ಬನ ವ್ಯಕ್ತಿ ಚಿತ್ರ

ಹೊಟ್ಟೆಡುಮ್ಮಣ್ಣ
ಕೈಕಾಲ್ ಸಣ್ಣಣ್ಣ
ಬೊಕ್ಕಬಾಯಿ ದೊಡ್ಡಣ್ಣ
ಹರ್‌ಕ್‌ಲ್‌ಬಾಯಿ ಕಿಟ್ಟಣ್ಣ

○ ಕುಲ್ಲಚನ ಕಾರ್ಯಪ್ಪ,
ಕುಂಬಳದಾಳು

ಅಪ್ಪಂಗೆ ಬೋನಸ್ ಬಾತ್

ಅಪ್ಪಂಗೆ ಬೋನಸ್ ಬಾತ್
ಮಂಜಂಗೆ ಖುಷಿ ಆತ್
ಅವ್ವಂಗೆ ಬಿಸಿ ಆತ್.

ಅಪ್ಪ ಬೋನಸ್ ತೆಕ್ತ್
ಮಂಜ ಚಾನ್ಸ್ ಹೊಡ್ತ್
ಅವ್ವನ ತಿಕ ಹರ್ತ್.

ಅಂಗಡಿ ಸಾಲ ಮುಕ್ತ್
ಹೊಟೇಲ್ ಬಿಲ್ಲ್ ತೀರ್ತ್
ಸರಾಯಿ ಸಾಲ ಕೊಟ್ಟತ್.

ಅಂದ್ ಸಂತೆಗೆ ಹೋತ್
ಮಾರ್ಕೇಟ್ ಸಾಮಾನ್ ತೆಕ್ತ್
ಬ್ಯಾಗ ತುಂಬಿ ಮಕ್ತ್.

ಹಸಿ ಮೀನ್ ಇತ್ತ್
ಕೇಜಿಗೆ ರೂಪಾಯಿ ಹತ್ತ್
ಒಂದು ಕೇಜಿ ತೆಕ್ತ್.

ಸಂತೆ ತೀರ ಮುಕ್ಸಿತ್
ಜೋಬುಂದ ಏಳ್ ಏಳ್ತ್
ನೂರು ಸರಾಯಿ ಹಾಕಿತ್.

ಬ್ಯಾಗ ಹೆಗ್‌ಲಿಗೆ ಕೋಸಿತ್
ತಲೆ ಕೆಳಗೆ ಆತ್
ತಳ್ಳರ ಮಳ್ಳರ ಬಾತ್.

ರಬಸಂದ ಅಡ್ಡ ದಾಟಿತ್
ಅತ್ತಿತ್ತ ಕಾಲ್ ಹಾಕಿತ್
ರೋಡುದ್ದ ಸರ್ವೇ ಮಾಡ್ತ್.

ತಿರ್ಗ್ಕನೊಮ್ಮೆ ಬಿದ್ದತ್
ಏಳ್ಕನೊಮ್ಮೆ ಕುದ್ದತ್
ಹೆಂಗೆಲ್ಲಾ ಮಾಡಿ ಎದ್ದತ್.

ನಾಯಿಯೊಂದು ದಾರಿಲಿ ಬಾತಿತ್
ಮನ್ಸರಂಗೆ ಅಪ್ಪಂಗೆ ಕಂಡತ್
ಸಲಾಮ್ ಒಂದು ಹಾಕಿತ್.

ಗೂಡೆ ಒಂದು ಎದ್‌ರ್‌ಗೆ ಸಿಕ್ಕಿತ್
ಸುರಾಲ್ ಸರ್ಟ್ ಹಾಕಿತ್ತ್
ಗಂಟೆ ಎಷ್ಟಣ್ಣತ ಅಪ್ಪ ಕೇಳ್ತ್.

ದಾರಿಲಿ ಕಲ್ಲೊಂದು ಹೆಟ್ಟಿತ್
ಮುಂಗುರ್ಸಿ ನೆಲಕ್ಕೆ ಬಿದ್ದತ್
ಎದ್ದ್ ಸಿಟ್ಟ್ಂದ ಕಲ್ಲಿಗೆ ಒದ್ದತ್.

ಗದ್ದೆಲಿ ತುಂಬಾ ನೀರಿತ್ತ್
ಏರಿಂದ ಕೆಳಗೆ ಬಿದ್ದತ್
ಹೆಂಗೆಲ್ಲಾ ಮಾಡಿ ಎದ್ದತ್.

ಬೆಲ್ಲನು ಮೀನನು ಒಟ್ಟಗಿತ್ತ್
ಬೀಳ್ಕನ ಏಳ್ಕನ ಒಂದಾತ್
ಮನೆಗೆ ಬಾಕನ ಗೈಸಾತ್.

ಗಂಡ್ ನಾಯಿನ ಅವ್ವ ಕಟ್ಟಿತ್ತ್
ಹೆಣ್ಣ್ ನಾಯಿನ ಬುಟ್ಟಿತ್ತ್
ನಾಯಿ ಅಪ್ಪನ ದೂರಲಿ ಕುಂಡತ್.

ಕಿವಿ ಮೇಲೆ ಎತ್ತಿತ್
ಯಾರೊ ತೇಳಿ ಬೋಗ್‌ಳ್ತ್
ಅಪ್ಪನ ಕಂಡ್ ಬಾಲ ಅಲ್ಲಾಡ್ಸಿತ್.

ಕುಂಯಿ ಕುಂಯಿ ತೇಳಿ ಹತ್ರ ಓಡ್ತ್
ಕಾಲ್ ಅಡಿಗೆ ಸಿಕ್ಕಿತ್
ಅಪ್ಪ ಮಗ್ಚ್ ಬೀತ್.

ಅವ್ವ ಓಡಿ ಬಾತ್
ಬ್ಯಾಗ್‌ನ ಕೈಗೆ ತಕ್ಂಡ್ತ್
ಅಪ್ಪನ ಮೇಲೆ ಎತ್ತಿತ್ತ್.

ಬ್ಯಾಗಂದ ಸಾಮಾನ್ ತೆಕ್ತ್
ಅಪ್ಪಂಗೆ ಬಾರಿ ಬೊಯಿತ್
ನೂಕಿ ಕಟ್ಲಗೆ ಹಾಕಿತ್.

ಪ್ಯಾಂಟ್ ಬಿಚ್ಚಿ ಬಿಸಾಡ್ತ್
ಕಂಬಳಿ ಏಳ್ಚ್ ಮಲ್ಗಿತ್
ಗುರ್‌ತ ನಿದ್ದೆ ಹೊಡ್ತ್.

ಜೋಬುನ ಅವ್ವ ಹುಡುಕಿತ್
ಸಿಕ್ಕಿದ ದುಡ್ಡನ ಹಾರ್ಸಿತ್
ಚೌಕಲಿ ಕಟ್ಟಿ ಮಡ್ಗಿತ್.

ಮಂಜ ಇದರ್ನ ನೋಡ್‌ತ್
ಅವ್ವ ನೀರಿಂಗೆ ಹೋಗಿತ್ತ್
ದುಡ್ಡನ ಮಂಜ ಹಾರ್ಸಿತ್.

ಅಪ್ಪಂಗೆ ಬೋನಸ್ ಬಾತ್
ಬಂದಗೆ ದುಡ್ಡು ಮುಕ್ತ್
ಮತ್ತೆ ಸಾಲಕ್ಕೆ ಹೊರ್ಟತ್.

○ ತೆಕ್ಕಡಿ ಬಿ. ಕುಮಾರ
ಮುತ್ತಾರ್ಮುಡಿ

ನಮ್ಮೂರ್

ಊರ್ ಊರ್ ನಮ್ಮೂರ್
ಅದೇ ಭಾಗಮಂಡಲ ನಮ್ಮೂರ್
ಸುತ್ತ ಎಲ್ಲಾ ಗುಡ್ಡೆಗಳ ಸಾಲ್
ಅದರ ಮ್ಯಾಲೆ ಹೊದಿಸಿಟ್ಟು ಹಚ್ಚಹಸೀರ್॥

ಉಟ್ಟು ನಾಲ್ಕು ಗ್ರಾಮಂಗ
ಅದೇ ಕೋರಂಗಾಲ, ಚೇರಂಗಾಲ,
ತಣ್ಣಿಮಾನಿ, ತಾವೂರು
ವಾಸಿಸುವೆ ಇಲ್ಲಿ ಗೌಡ ಜನಾಂಗ
ಇವರ ಮೂಲ ಅಮರ ಸುಳ್ಯ ॥

ಲ್ಯಾಯ್ಕನ ಹೆಸರ್ ಈ ಊರಿಗೆ
ಪ್ರಕೃತಿ ಕೊಟ್ಟ ಈ ಕೊಡುಗೆ
ಹರ್ದದೆ ಕಾವೇರಿ ಮೆಲ್ಲ ಮೆಲ್ಲಂಗೆ
ಮಾಡಿಟು ಸಂಗಮ ಭಾಗಮಂಡಲಲಿ ॥

ಮಳೆಗಾಲ ಸುರಾದರೆ ಸಾಕ್
ಯಡೆ ಇಲ್ಲದ ಜಡಿ ಮಳೆ
ಹೇಳಿವೆ ಜನ ಈ ಮಾತ್
ಸಾಕಪ್ಪ ಸಾಕ್ ಈ ಮಳೆ ॥

ದುಡ್ದವೆ ಜನ ತಮ್ಮ ಪಾಡಿಗೆ
ಬೆಳ್ದವೆ ಭತ್ತ, ಕಾಫಿ, ಯಾಲಕ್ಕಿ
ಅದರ ಜೊತೆಗುಟ್ಟು ಜೇನ್ ಸಾಕಾಣಿಕೆ
ಇದೇ ಕೊಡಗಿನ ಬೆಡಗಿನ ಊರ್
ಭಾಗಮಂಡ್ಲ ॥

○ ಅಂಬ್ರಾಟ ಭಗವತಿ ಪ್ರಸಾದ್ ಮದೆ

ಕೊಡಗು ಸಂಗಾತಿ ಪತ್ರಿಕೆನ ತಕಂಡ್ ಓದಿ

ಹಾಸ್ಯ ಲೇಖನ :

ಕೊತ್ತಿ ಪಟ್ಟ ಪಾಡ್

ನಾನ್ ಒಂದು ದಿನ ಹಟ್ಟಿಗೆ ಹೋಗಿ ಕರ್ ಬುಟ್ಟ್‌ಕಂಡ್, ಯಾಗೋಳ್ನಂಗೆ ಹಾಲ್ ತಂದ್ ಒಲೆ ತಿಟ್ಟೇಲಿ ವೊಡ್ಗಿ ಸೆಗಣಿ ಕಾಲ್ ತೊಳಿಯಕ್ಕೆ ಹೋದೆ. ಈ ನನ್ನ ಕೊತ್ತಿ ಉಟ್ಟಲ್ಲ ಅದಿಕೆ ಹಾಲ್ ವಾಸನೆ ಕೇಳಿ, ಏನ್ ಕೆಲ್ಸ ವಾಡ್ತ್ ಗೊತ್ತಕ್ಕಾ, ಹೇಳಿಕೆ ಸಿಟ್ಟ್ ಬಂದೆ, ಇತ್ತ ಪಾಪತಾ ಆದೆ. ಹೆಂಗೆ ತೇಳಿರೆ ಚೊಂಬು ಬಾಯಿ ಸ್ವಲ್ಪ ಸಣ್ಣ ಬಾಯಿ. ಈ ಕೊತ್ತಿ ಬಿಕ್ಕನ ಬೀರಿ ಹಾಲ್‌ನ ಕುಡ್‌ದ್ ಆಕನ ಒವ್ಮ್ಮೆಗೆ ಒಲೆಗೆ ಬಿದ್ದ್ ಬಿಡ್ತ್. ರೊಟ್ಟ ವಾಡ್‌ದ ಒಲೆ ತುಂಬಾ ಕೆಂಡ ಇತ್ತ್, ಹಿಂಗಾಗಿ ಕೊತ್ತಿನ ಪಾಡ್ ಕೇಳ್. ಹಾಲ್ ಎಲ್ಲಾ ಸುರ್‌ದ್ ಹೋೕತ್, ಕೊತ್ತಿನ ಕೈ ಕಾಲ್ ಬಾಲ ಸವೇತ ಸುಟ್ಟ್ ಕಾಲ್ ಕೈಗುಳ್ಳೆ ಬಂದ್ ಹೋೕತ್. ವುನೆ ಒಳಗೆ ಪೂರಾ ಕರೀ ವಾಸನೆ ಬ್ಯಾರೆ. ಈಗ ಕೊತ್ತಿಗೆ ನಡೆಕೇ ಆದುಲೇ, ಈಗ ಯಾವ ಚೊಂಬುನ ಕಂಡರೆ ಸಾಕ್ ಕೊತ್ತಿ ಕುಂಟಿಕಂಡ್, ಬಾಲ ಎಳಕಂಡ್ ಓಡಿಕೆ ನೋೕಡ್‌ದೆ.

ವುನೇಲಿ ಈಗ ಇಲಿಗಳ ಡ್ಯಾನ್ಸ್ ಕೇಳಿಕೆ ಆದುಲೆ. ದಸರಾ ಹಬ್ಬಕೆ ಅಟ್ಟಲಿ ಡಿಸ್ಕೋ ಡಾನ್ಸ್ ಪಲ್ಟಿ ಹೊಡ್‌ಕಂಡ್ ಕುಷೀಲಿ ಒಳ. ನನ್ನ ಕೊತ್ತಿಪಾಡ್ ಹಿಂಗೆ ಆತ್‌ರಾ.

○ ಸಿ ಎ. ಕವುಲಮ್ಮ, ವುಕೇರಿ

ನಾಕ್ ಸೆಂಟ್ ಅಲ್ಲ ಹತ್ತ್ ಸೆಂಟ್

ರಾವೇಗೌಡ್ರ ವುನೇಲಿ ಕೆಂಚ ತೇಳ್‌ವಂವ ಕೆಲ್ಸಕ್ಕೆ ಇದ್ದದೆ. ಅಂವ ಹೀಂಗೆ ಕೆಲ್ಸ ವಾಡಿ ವಾಡಿ ರಾವೇಗೌಡ್ರ ಕೈಯಿಂದ 10 ಸೆಂಟ್ ಜಾಗ ತಕ್ಕಂಡದೆ. ಆಗ ಅವಂಗೆ ಖುಷಿಯೋ ಖುಷಿ. ಏಕೆ ತೇಳ್‌ರೆ ಆ 10 ಸೆಂಟ್ ಜಾಗ ಅವಂದ್ ಸ್ವಂತ ಆತಲ್ಲಾ ಅದ್ಕೆ. ಹೀಂಗೆ ಅಂವ ಎಲ್ಲಿಗೋ ಹೋಗಿ ಬಾಕಾಕನ ದಾರ್ಲಿ ಕುಣ್‌ಕಂಡ್ ಬರ್ತ್ತಿರ್ದ್ದದೆ. ಇಂವ ಹಿಂಗೆ ಕುಣ್‌ಕಂಡ್ ಬಾಕಾಕನ ದಾರಿಲಿ 7-8 ಕಾಲೇಜ್ ಗೂಡೆಗ ಕ್ಲಾಸ್ ಬುಟ್ಟ್ ಬರ್ತ್ತಿದ್ದವೆ. ಇಂವ ಹೋೕವ ರಬಸಲಿ ಒಂದ್ ಗೂಡೆಗೆ ಕುಟ್ಟ ಹೋೕದೆ. ಆಗ ಆ ಗೂಡೆ ಕೆಂಚಂಗೆ "ಥೂ ನಾನ್‌ಸೆನ್ಸ್" ತೇಳಿ ಬೈಯ್ದದೆ. ಆಗ ಕೆಂಚ ಹೇಳ್ದೆ ಅಯ್ಯೋ ಅಕ್ಕ ನಾನ್ ನಾಕ್‌ಸೆಂಟ್ ಜಾಗ ತಕಂಡ್ದ್ ಅಲ್ಲ, 10 ಸೆಂಟ್ ಜಾಗ ತಕ್ಕಂಡ್ದ್‌ತ ಹೇಳಿ ಅಂವ ಸೀದಾ ಹೋದೆ.

○ ಮುಕ್ಕಾಟೀರ ವುಮತಾ ಪೂಣಚ್ಚ, ಹೊಸ್ಕೇರಿ.

ಈರುವೆಯಿಂದ ಪ್ರಾಣ ಉಳ್ತ್

ಒಂದ್ ಊರ್ಲಿ ಒಬ್ಬ ರೈತ ಇತ್ತ್. ಅವಂಗೆ ಪಾಪ ಒಂದು ಕೈ ಇಲ್ಲೆ. ಅವನ ಹೆಣ್ಣಿಗೆ ಕಣ್ಣು ಕಾಂಬೊದ್ಲೆ. ಎರಡ್ ವುಕ್ಕಳ್ ವಳ. ಅವು ಒಂದಕ್ಕೂ ಪ್ರಯೋಜನ ಇಲ್ಲೆ. ಮೂಡಣಕ್ಕೆ ಹೋಗೂಂತ ಹೇಳ್‌ಕಾಕನ ಪಡುವಣಕ್ಕೆ ಹೋೕದವೆ. ಹೀಂಗೆ ರೈತ ಏನಾದರೂ ಕೆಲ್ಸ ವಾಡಿ ತಿಂಬೋೕನೋೕತೇಳಿರೆ ಅವನ ಒಂದು ಕೈಲಿ ಆದುಲೆ. ಹಿಂಗೆ ರೈತ ಕೆಲ್ಸ ವಾಡಿ ವಾಡಿ ಸಾಕಾಗಿ ಇನ್ನ್ ನನ್ನ ಒಂದು ಕೈಲಿ ಆದುಲೆತಾ ಹೇಳಿ ಒಂದು ದಿನ ಗ್ಯಾನ ವಾಡ್ತ್. ಎಲ್ಲಾದರೂ ಹೋಗಿ ಬಿದ್ದ್ ಸತ್ತನೆ ಅಂತಾ ಹೋೕತು. ಹಿಂಗೆ ಆ ರೈತ ಒಂದು ದಿನ ದೊಡ್ಡ ವುಹಡಿ ಹತ್ತಿ ಕೆಳಗೆ ಬಿದ್ದ್ ಸತ್ತನೆ ಅಂತ ಹೇಳಿ ಹಾರಿಕೆ ನೋೕಡ್ಕನಾ ಕೆಳಗೆ ಎರಡು ಕೈಯಿಲ್ಲದ ವುನುಷ್ಯ ಜೋೕರಾಗಿ ಕುಣಿತ್ತಾ ಉಟ್ಟ್. ಅಲ್ಲಾ ಇಂವ ಎರಡು ಕೈ ಇಲ್ಲದ ವುನುಷ್ಯ ಇಷ್ಟು ಖುಷಿಲಿ ಕುಣ್ಯೆಕಾಕನ ನಾನ್ ಒಂದು ಕೈ ಇಲ್ಲದ ವುನುಷ್ಯ ಯಾಕೆ ಸಾಯದೂಂತ ಹೇಳಿಕಂಡ್ ಕೆಳಗೆ ಇಳ್‌ದ್ ಬಂದ್, ಎರಡ್ ಕೈ ಇಲ್ಲದಂವನ ಇಷ್ಟ್ ಖುಷಿಲಿ ಕುಣಿತ್ತಾವಳಾ ತೇಳಿ ಕೇಳಕಾಕನ ಅಯ್ಯೋ ವಾರಾಯ ನನ್ನ ಕಷ್ಟ ಯಾರಿಗೆ ಹೇಳ್ದು. ಅದ್, ತಿಕದ್ ಸಂದ್‌ಗೆ ಇರುವೆ ಕಚ್ಚಿಟು. ಉರಿ ತಡೆಯಕಾಗದೆ ಒದ್ದಾಡ್ತಾವಳೆ. ನೀನಾದರೂ ಈ ಇರುವೆನಾ ತೆಗಿ. ಇಲ್ಲದಿದ್ದರೆ ನಾನ್ ಸತ್ತುಹೋೕನೆ ತೇಳ್ದೆ. ಈ ಒಂದು ಕೈ ಇಲ್ಲದ ವುನುಷ್ಯ ಅದನ್ನ ತೆಗ್ತ್. ಹಿಂಗೆ ಒಂದು ಕೈ ಇಲ್ಲದಂವ ಎರಡು ಕೈ ಇಲ್ಲದವನ ಪ್ರಾಣ ಉಳಿಸಿತ್. ಅದಕ್ಕೆ ಹೇಳ್ದು ಒಬ್ಬಂದೊಬ್ಬಂಗೆ ಸಹಾಯ ಬೇಕುತ್ತಾ.

○ ಪಟ್ಟಡ ಹರೀಶ ಸುಬ್ಬಯ್ಯ, ವುದೆನಾಡು

ಪ್ರೇಮಪತ್ರ

ರವಿ : ಈಗನ ಗೂಡೆಗ ಕಾಲೇಜಿಗೆ ಹೋೕಕಾಕನ ಎರ್‌ಡೇ ಬುಕ್ಕ್ ಇದ್ದರೂ ದೊಡ್ಡ ಬ್ಯಾಗ್‌ನ ಹಿಡ್‌ಕಂಡ್ ಹೋೕದ್ ಯಾಕೆ ?

ರಾಜ : ಅವ್ಕೆ ಪ್ರೇಮ ಪತ್ರನ ಹಾಕಿಕೆ ಜಾಗ ಬೇಕಲ್ಲ ಅದ್ಕೆ.

ಹನಿಮೂನ್

ಒಬ್ಬ : ಏನ್‌ರಾ, ನೀನ್ ಕಾಶ್ಮೀರಕ್ಕೆ ಹನಿಮೂನ್‌ಗೆ ಹೋೕಕುತ, ನಿನ್ನ ಹೆಣ್ಣ್ ಕನ್ಯಕುವಾರಿಗೆ ಹನಿಮೂನ್‌ಗೆ ಹೋೕಕುತ ಹೇಳ್‌ತಿದ್ದಲ್ಲ ಏನಾತ್ ?

ಇನ್ನೊಬ್ಬ : ನಾನ್ ಕಾಶ್ಮೀರಕ್ಕೆ ಹೋಗಿ ಬಂದೆರ, ನನ್ನ ಹೆಣ್ಣ್ ಕನ್ಯಾಕುವಾರಿಗೆ ಹೋಗಿ ಹನಿಮೂನ್ ವುುಗಿಸಿಕಂಡ್ ಬಾತ್‌ರ.

○ ಅಚ್ಚಲ್ಪಾಡಿ ಬೀನ, ಗದ್ದಿಗೆ

ಸ್ವಾತಂತ್ರ್ಯ ಹೋರಾಟಗಾರ, ಖಾದಿದಾರಿ, ಕಟ್ಟಾ ಅರೆಭಾಷಿಕ, ಮಾಜಿ ಶಾಸಕ ಪಾಂಡನ ಡಿ. ಸುಬ್ಬಯ್ಯ ಇನ್ನಿಲ್ಲ



ದಿ|| ಪಿ. ಡಿ. ಸುಬ್ಬಯ್ಯ

ತಾ|| 12-12-1997ರ ಮಟ ಮಟ ಮಧ್ಯಾಹ್ನ 1-45 ಗಂಟೆಗೆ ಪಿ.ಡಿ ಸುಬ್ಬಯ್ಯನವರು ಹೃದಯಘಾತದಿಂದ ಮಡಿಕೇರಿಯ ಗೌಡ ಸಮಾಜದ ಅತೀ ಮುಖ್ಯ ಸಭೆಯಲ್ಲಿ ಎಲ್ಲರೆದುರು ಕುಸಿದಾಗ ಎಲ್ಲರಿಗೂ ಆಘಾತವಾಗಿತ್ತು. ಇವರ ಜೀವನ ಪೂರ್ತಿ ಗೌಡರ ಏಳಿಗೆಗೆ ಮೀಸಲಿಟ್ಟದ್ದು ಅಲ್ಲದೆ ಅವರ ಕೊನೆಯುಸಿರು ಗೌಡರ ಏಳಿಗೆಗೆ ಚರ್ಚಿಸುತ್ತಿರುವಾಗಲೇ ಕೊನೆಗೊಂಡಿದ್ದು ಆಶ್ಚರ್ಯವೇ ಸರಿ.

ಇವರು 5 ಗಂಡು 2 ಹೆಣ್ಣು ಮಕ್ಕಳು ಹಾಗೂ ನಮ್ಮ ಜನಾಂಗವನ್ನು ಅಗಲಿದ್ದು ಗೌಡ ಜನಾಂಗಕ್ಕೆ ತುಂಬಲಾರದ ಅಪಾರ ನಷ್ಟವೇ ಸರಿ. ಇವರ ಸಂದರ್ಶನದ ಪೂರ್ಣ ವಿವರವನ್ನು "ಕೊಡಗು ಸಂಗಾತಿ" ಜೂನ್ ಮೊದಲ ಸಂಚಿಕೆ (1ರಿಂದ 15-1997)ಯಲ್ಲಿ ಪ್ರಕಟಿಸಲಾಗಿದೆ. ಇವರಿಗೆ "ಕೊಡಗು ಸಂಗಾತಿ" ಸಂತಾಪ ಸೂಚಿಸುತ್ತದೆ.

K.R.N.N. 240

ಕೊಡಗಿನ ರೈತ ಬಾಂಧವರಿಗೆ

ಸುವರ್ಣಾವಕಾಶ

ಕೆರೆಯು ಹೂಳೆತ್ತುವ, ತೋಟದ ಹೊಂಡ ನಿರ್ಮಾಣ,
ನೀರು ಶೇಖರಣಾ ಟ್ಯಾಂಕು, ರಸ್ತೆ ನಿರ್ಮಾಣ ಕಾರ್ಯ
ಮೊದಲಾದ ಕೆಲಸ ಕಾರ್ಯಗಳಿಗೆ ಕಡಿಮೆ ಅವಧಿಯಲ್ಲಿ
ಹಾಗೂ ಕಡಿಮೆ ವೆಚ್ಚದಲ್ಲಿ "ಎಕ್ಸ್‌ಕವೇಟರ್
(EXCAVATOR) ಎಂಬ ನೂತನ
ಮಾದರಿಯ ಯಂತ್ರದಿಂದ
ಮಾಡಿಕೊಡಲಾಗುವುದು

ಈ ಸದುಪಯೋಗವನ್ನು ಉಪಯೋಗಿಸಿಕೊಳ್ಳಲು ಮರೆಯದಿರಿ

ಸಂಪರ್ಕಿಸಬೇಕಾದ ವಿಳಾಸ :

ಪ್ರಮೋದ್‌ಕುಮಾರ್ ರೆಡ್ಡಿ
ಎಸ್. ವಿ. ಕನ್‌ಸ್ಟ್ರಕ್ಷನ್ಸ್
C/o ಹೊಟೇಲ್ ಕಾವೇರಿ, ಸ್ಕ್ವ[illegible]
ಮಡಿಕೇರಿ.
ದೂರವಾಣಿ : 08272 25492

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-12
Published at Mysore, Editor PATTADA. P. SHEELAMANI, 322, Hinkal Village & Post, (Near Aralikatte) Mysore-570 017 Phone : 516771